بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಸಂಚಿಕೆ: 37

ಕನ್ನಡ ಬದರ್ ವಾರ ಪತ್ರಿಕೆ WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

24 ಸೆಪ್ಟೆಂಬರ್ 2020, 24 ತಬೂಕ್ 1399 ಹಿಜರಿ ಶಮ್‌ಸಿ,
06 ಸಫರ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْۤا اَطِيْعُوا اللّٰهَ وَاَطِيْعُوا
الرَّسُوْلَ وَاُولِی الْاَمْرِ مِنْكُمْ ۚ
فَاِنْ تَنَازَعْتُمْ فِیْ شَیْءٍ فَرُدُّوْهُ
اِلَی اللّٰهِ وَالرَّسُوْلِ (النساء:60)

*(ಅನ್ನಿಸಾಅ್:60)*

ಅಂದರೆ: ಎಲೈ ವಿಶ್ವಾಸಿಗಳೇ, ಅಲ್ಲಾಹನಿಗೆ ನೀವು ವಿಧೇಯರಾಗಿರಿ. (ಅವನ) ಸಂದೇಶವಾಹಕನಿಗೂ ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ. ಯಾವುದಾದರೂ ವಿಚಾರದಲ್ಲಿ ನಿಮ್ಮೊಳಗೆ ಭಿನ್ನಾಭಿಪ್ರಾಯವಿದ್ದರೆ, ನೀವು ಅಲ್ಲಾಹನಲ್ಲಿ ಮತ್ತು ಅಂತ್ಯದಿನದಲ್ಲಿ ವಿಶ್ವಾಸವುಳ್ಳವರಾದರೆ, (ಇತ್ಯರ್ಥಕ್ಕಾಗಿ) ಅದನ್ನು ಅಲ್ಲಾಹನಿಗೂ (ಅವನ) ಸಂದೇಶವಾಹಕನಿಗೂ ಒಪ್ಪಿಸಿರಿ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ನಮಾಝಿನಲ್ಲಿ ಏಕಗ್ರತೆ ಮತ್ತು ತಲ್ಲೀನತೆ ತುಂಬ ಅವಶ್ಯಕವಾಗಿದೆ.

* ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ಹೇಳಿದರು: ಆ ಜನರಿಗೆ ಏನಾಗಿದೆ ಅವರು ನಮಾಝಿನಲ್ಲಿ ತಮ್ಮ ದೃಷ್ಟಿಗಳನ್ನು ಆಕಾಶದೆಡೆ ಹಾಯಿಸುತ್ತಾರೆ? ಅವರು ಎಷ್ಟು ಕಠಿಣವಾಗಿ, ಎಲ್ಲಿಯವರೆಗೆ ಎಚ್ಚರಿಕೆ ನೀಡಿ ಹೇಳಿದರೆಂದರೆ– ಅದರಿಂದ ಅವರು ಜಾಗ್ರತೆ ವಹಿಸಲಿಲ್ಲವಾದರೆ ಅವರು ದೃಷ್ಟಿ ಕಿತ್ತುಕೊಳ್ಳಬಹುದಾಗಿದೆ. (ಸಹೀ ಬುಖಾರಿ ಸಂಪುಟ–2, ಕಿತಾಬುಲ್ ಅಝಾನ್, ಬಾಬ್ ರಫಅಲ್ ಬಸರ್ ಇಲಸ್ಸಮಾ ಫಿಸ್ಸಲಾತಿ)

* ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ ನಾನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ನಮಾಝಿನಲ್ಲಿ ಆಚೆ ಈಚೆ ನೋಡುವುದರ ಬಗ್ಗೆ ಕೇಳಿದೆ ಅವರು(ಸ) ಹೇಳಿದರು: ಇದು ಶೈತಾನನ ಒಂದು ಆಕ್ರಮಣವಾಗಿದೆ. ಅದು ದಾಸನೊಬ್ಬನ ನಮಾಝಿನ ಮೇಲೆ ಮಾಡಯುಸುತ್ತಾನೆ ಆದರಿಂದ ಕೆಲ ಭಾಗ ಪಡೆಯುತ್ತಾನೆ.

* ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ನಬಿ(ಸ) ಒಂದು ಗೆರೆ ಇರುವ ಕಪ್ಪು ಚಾದರ ಮೇಲೆ ನಮಾಝ್ ನಿರ್ವಹಿಸಿದರು. ಅದರ ಮೇಲೆ ಹೂಬಳ್ಳಿಗಳು ಅಚ್ಚಾಗಿದ್ದವು. ಅವರು(ಸ) ಹೇಳಿದರು: ಅದರ ಅಚ್ಚು ಶೃಂಗಾರವು ನನ್ನ ಗಮನ ಬೇರೆಡೆ ತಿರುಗಿಸಿದೆ ಇದನ್ನು ಅಬೂ ಜಹಮ್ ಬಳಿಗೆ ತೆಗೆದುಕೊಂಡು ಹೋಗಿರಿ ಮತ್ತು ಅವನ ಸರಳ ಚಾದರನ್ನು ನನಗೆ ತಂದುಕೊಡಿ. (ಸಹೀ ಬುಖಾರಿ, ಸಂಪುಟ–2, ಕಿತಾಬುಲ್ ಅಝಾನ್, ಬಾಬ್ ಅಲ್‌ಇತ್ತಿಫಾತ್ ಫಿಸ್ಸಲಾತ್)

* ಮೌತಾ ಇಮಾಮ್ ಮಾಲಿಕ್‌ನಲ್ಲಿ ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರತ್ ಅಬೂ ಜಹಮ್ ಈ ಚಾದರ್ ನಬಿ(ಸ) ಅವರಿಗೆ ಉಡುಗೋರೆಯಾಗಿ ನೀಡಿದರು ಅದನ್ನು ಅವರು(ಸ) ರದ್ದು ಮಾಡುವ ಬದಲು ಅದಲು ಬದಲು ಮಾಡಿಕೊಂಡರು.

## ಪ್ರಾರ್ಥನೆ (ದುಆ) ಯ ಅರ್ಹತೆ ಪಡೆಯುವ ಮೊದಲು ಸತ್ಕರ್ಮ ಮತ್ತು ನಿಷ್ಠೆ ಪ್ರಾಪ್ತಿ ಅನಿವಾರ್ಯವಾಗಿರುತ್ತದೆ. ಯಾವ ವ್ಯಕ್ತಿ ತಮ್ಮ ವಿಶ್ವಾಸ ನಿಷ್ಠೆ ಸರಿಪಡಿಸಿಕೊಳ್ಳುವುದಿಲ್ಲವೋ ಮತ್ತು ಸತ್ಕರ್ಮ ಕೈಗೊಳ್ಳುವುದಿಲ್ಲವೋ, ಅವನು ದುಆ ಮಾಡುವುದೆಂದರೆ ಅವನು ಅಲ್ಲಾಹನನ್ನು ಪರೀಕ್ಷಿಸಿದಂತೆ.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ದೈವಿಕ ನಿಯಮಗಳಲ್ಲಿ ಸದಾ ಪ್ರಾರ್ಥನೆಗೆ ಮುಖ್ಯ ಪಾತ್ರವಿದೆ. ಇಂದು ಭೌತಿಕಪ್ರೀಯ ಜನರು, ಆಧ್ಯಾತ್ಮಿಕ ಜ್ಞಾನ ಹೊಂದದವರ ಎಲ್ಲ ಪ್ರಯತ್ನಗಳು ಹಾಗೂ ಅವರ ದೌಡು ಯೂರೋಪಿನ ಸಮಾಜದ ಸಂಸ್ಕೃತಿಯ ನಕಲು ಮಾಡುವುದಾಗಿದೆ. ದುಆ ಎಂದರೆ ಒಂದು ಬಿದ್‌ಅತ್ ಎಂದು ಭಾವಿಸುತ್ತಾರೆ. ಆದುದರಿಂದ ದುಆದ ಕುರಿತು ಚರ್ಚಿಸುವುದು ಉಚಿತ ಎಂದು ಭಾವಿಸುತ್ತೇನೆ.

ನೋಡಿರಿ ಒಬ್ಬ ಮಗು ಹಸಿವಿನಿಂದ ಬಳಲಿ ಚೀರಾಡುವಾಗ ಅವನ ತಾಯಿಯ ಸ್ತನದಿಂದ ಹಾಲು ಉಕ್ಕಿ ಬರುತ್ತದೆ. ಆದರೆ ಮಗು ಪ್ರಾರ್ಥನೆಯ ಹೆಸರು ಕೂಡ ಕೇಳಿರುವುದಿಲ್ಲ. ಆದರೆ ಇಲ್ಲಿ ಯಾತಕ್ಕಾಗಿ ಮಗುವಿನ ಚೀರಾಟದಿಂದ ಹಾಲು ಉಕ್ಕಿ ಬರುತ್ತದೆ. ಇದೆಂತಹ ಕಾರ್ಯವಾಗಿದೆ ಎಂದರೆ ಸಾಮಾನ್ಯವಾಗಿ ಅದರ ಅನುಭವ ಪ್ರತಿಯೊಬ್ಬರಿಗಿದೆ. ಕೆಲವು ಸಮಯ ಹೀಗೂ ಆಗಿದೆ ತಾಯಂದಿರು ತಮ್ಮ ಸ್ತನಗಳಲ್ಲಿ ಹಾಲಿದೆ ಎಂದು ಭಾವಿಸುವುದಿಲ್ಲ. ಕೆಲವೊಮ್ಮೆ ಇರುವುದೂ ಇಲ್ಲ, ಆದರೆ ಮಗುವಿನ ನೋವುಭರಿತ ಚೀರಾಟ ಕಿವಿಯಲ್ಲಿ ಬೀಳುತ್ತಲೆ ತಕ್ಷಣದಿಂದ ಹಾಲು ಉಕ್ಕಿಬರುತ್ತದೆ. ಅಂದರೆ ಮಗುವಿನ ಈ ಚೀರಾಟಕ್ಕೆ ಹಾಲು ಉಕ್ಕಿಬರುವುದಕ್ಕೆ ಅನ್ಯೋನ್ಯ ಸಂಬಂಧವಿದೆ ಎಂದು ತಿಳಿಯಬಹುದು. ನಾನು ಸತ್ಯವಾಗಿ ಹೇಳುತ್ತೇನೆ ನಾವು ಅಲ್ಲಾಹನ ಮೇಲೆ ಇಂತಹದೆ ಚೀರಾಟ ದುಃಖ ವ್ಯಕ್ತಪಡಿಸಿದರೆ ಅವನ ಅನುಗ್ರಹ ಔದಾರ್ಯವು ಪಡೆಯಬಹುದಾಗಿದೆ. ಅದು ಅದಕ್ಕೆ ಪ್ರೇರಣೆಯಾಗುತ್ತದೆ ಮತ್ತು ಅವನನ್ನು ಸೆಳೆಯುತ್ತದೆ. ನಾನು ನನ್ನ ಅನುಭವದ ಮೆರೆಗೆ ಹೇಳುತ್ತೇನೆ ಅಲ್ಲಾಹನ ಅನುಗ್ರಹ ಹಾಗೂ ಔದಾರ್ಯವು ಅದು ಪ್ರಾರ್ಥನೆಯ ಸ್ವೀಕೃತಿಯ ರೂಪದಲ್ಲಿ ಬರುತ್ತದೆ. ನಾನು ತನ್ನೆಡೆ ಆ ಸೆಳೆತವನ್ನು ಭಾವಿಸಿದ್ದೇನೆ ಬದಲು ಹೇಳಬಹುದು ಅದನ್ನು ಕಂಡಿರುತ್ತೇನೆ. ಹೌದು ಈ ಕಾಲದ ಅಂದರೆ ಮೆದುಳಿನ ಫಿಲಾಸಫರ್ ಅದನ್ನು ಗ್ರಹಿಸಕೊಳ್ಳದಿದ್ದರೆ ಅಥವಾ ಕಾಣದಿದ್ದರೆ ಈ ಸತ್ಯ ಲೋಕದಿಂದ ಎತ್ತಲ್ಪಡುವುದಿಲ್ಲ ವಿಶೇಷವಾಗಿ ಇಂತಹ ಪರಿಸ್ಥಿತಿಗಳಲ್ಲಿ ಪ್ರಾರ್ಥನೆಯ ಸ್ವೀಕೃತಿಯ ಫಲವನ್ನುಳಿಸಲು ನಾನು ಯಾವಾಗಲೂ ಸಿದ್ಧನಿದ್ದೇನೆ. ನೋಡಿರೀ!! ಈ ನಾಲಿಗೆ ಅಲ್ಲಾಹನು ಜೊಲ್ಲುರಸ ಹಾಗೂ ಎಲುಬುವಿಲ್ಲದ ಅಂಗದಿಂದ ಅದನ್ನು ಸೃಷ್ಟಿಸಿರುವನು ಹೀಗೆ ಮಾಡುತ್ತಿರಲಿಲ್ಲವಾದರೆ ನಾವು ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ ಇಂತಹ ನಾಲಿಗೆಯನ್ನು ನಮಗೆ ದಯಪಾಲಿಸಿದ್ದಾನೆ ಅದು ಮನಸ್ಸಿನ ಭಾವನೆಗಳನ್ನು ಇಚ್ಛೆಗಳನ್ನು ಸಹ ವ್ಯಕ್ತಪಡಿಸಲು ಶಕ್ತವಾಗಿದೆ.

ನಾವು ಈ ಪ್ರಾರ್ಥನೆಯ ಕಾರ್ಯ ನಾಲಿಗೆಯಿಂದ ಸಾಧಿಸಲಿಲ್ಲವಾದರೆ ನಮ್ಮ ದೌರ್ಭಾಗ್ಯವಾಗಿದೆ. ದುಆ ಪ್ರಾರ್ಥನೆ ಎಂಬುದು ಎಂತಹ ರಸವತ್ತಾದ ಭಾವನೆಯಾಗಿದೆ ನನಗೆ ತುಂಬ ವಿಷಾಧ ಎನಿಸುತ್ತದೆ. ನಾನು ಯಾವ ರೀತಿಯಲ್ಲಿ ಅದರ ಸ್ವಾದ ಮತ್ತು ಸಂತೋಷ ಲೋಕಕ್ಕೆ ತಿಳಿಸಲಿ. ಇದು ಭಾವಿಸುವವರೆ ಅನುಭವಿಸಬಹುದು. ಸಂಕ್ಷಿಪ್ತವಾಗಿ ಹೇಳಬೇಕಾದರೆ ಪ್ರಾರ್ಥನೆಯ ಅರ್ಹತೆ ಪಡಯುವ ಮೊದಲು ಸತ್ಕರ್ಮ ಮತ್ತು ನಿಷ್ಠೆ ಪ್ರಾಪ್ತಿ ಅನಿವಾರ್ಯವಾಗುತ್ತದೆ. ಏಕೆಂದರೆ ಯಾವ ವ್ಯಕ್ತಿ ತಮ್ಮ ವಿಶ್ವಾಸ ನಿಷ್ಠೆ ಸರಿಪಡಿಸಿಕೊಳ್ಳುವುದಿಲ್ಲವೋ ಮತ್ತು ಸತ್ಕರ್ಮಗಳು ಕೈಗೊಳ್ಳುವುದಿಲ್ಲವೋ ಅವನು ದುಆ ಮಾಡುವುದೆಂದರೆ ಅವನು ಅಲ್ಲಾಹನನ್ನು ಪರೀಕ್ಷಿಸಿದಂತೆಯೇ ಸರಿ. ವಿಷಯವೇನೆದರೆ **"ಇಹ್ದಿನಸ್ಸಿರಾತಲ್ ಮುಸ್ತಖೀಮ್"** ಪ್ರಾರ್ಥನೆಯ ಉದ್ದೇಶವು ತನ್ನ ಕರ್ಮಗಳನ್ನು ಪರಿಪೂರ್ಣ ಹಾಗೂ ಉತ್ತಮಗೊಳಿಸಕೊಳ್ಳ ಬೇಕು ಮತ್ತು ಹೇಳಬೇಕು– ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಮ್ ಇದು ಇನ್ನೂ ಸರಳಗೊಳಿಸಿದೆ ನಾವು ಅನುಗ್ರಹಿತರಾದವರ ಮಾರ್ಗ ಬಯಸುತ್ತೇವೆ ಅವರ ದುಷ್ಕರ್ಮಗಳಿಂದಾಗಿ ಅವರು ಶಿಕ್ಷೆಗೆ ಪಾತ್ರರಾಗಿದ್ದರು ಮತ್ತು **"ಅದ್ದಾಲ್ಲೀನ್"** ಎಂದು ಹೇಳಿ ನಮಗೆ ಶಿಕ್ಷಣ ನೀಡಿದ್ದು– ನನ್ನ ಕೃಪೆ ಇಲ್ಲದೆ ದಾರಿತಪ್ಪಿದವರಿಂದ ನಮ್ಮನ್ನು ರಕ್ಷಿಸು. **(ಮಲ್‌ಫೂಝಾತ್, ಸಂಪುಟ–1, ಪುಟ–183–185, ಮುದ್ರಣ ಖಾದಿಯಾನ್ 2018)**

## ನೀವು ಅಲ್ಲಾಹನೊಡನೆ ಯಾವ ರೀತಿಯ ಸಂಬಂಧ ಬೆಳೆಸಬೇಕೆಂದರೆ ಉತ್ತಮವಾದ ಸಮಯದಲ್ಲಿ ನಮಗೆ ಅಗಲಿಕೆಯ ಸಮಯ ಬರಬೇಕು.

**"ಫಲಾತಮೂತುನ್ನ ಇಲ್ಲ ವ ಅನ್‌ತುಮ್ ಮುಸ್ಲಿಮೂನ್"** (ಅಲ್‌ಬಖರ: 133) ರ ವ್ಯಾಖ್ಯಾನದಲ್ಲಿ ಸಯ್ಯದುನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

"ಫಲಾ ತಮೂತುನ್ನ ಇಲ್ಲ ವ ಅನ್‌ತುಮ್ ಮುಸ್ಲಿಮೂನ್" ಇದರ ಎರಡು ಅರ್ಥಗಳಿವೆ. ಒಂದನೆಯದು ಎಲ್ಲ ಸಮಯದಲ್ಲೂ ಇಸ್ಲಾಮಿನ ಮೇಲೆ ಸ್ಥಿರವಾಗಿರಿ. ಏಕೆಂದರೆ ಮೃತ್ಯುವಿನ ಸಮಯ ಯಾರು ತಿಳಿದಿರುವುದಿಲ್ಲ ಅದು ಯಾವಾಗ ಬರುವುದು ಎಂದು. ಆದುದರಿಂದ ಎಲ್ಲ ಸಮಯದಲ್ಲೂ

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ✿ شَرَّ السُّمُوْمِ عَدَاوَةُ الصُّلَحَاءِ

## ಐದುನೂರು ರೂಪಾಯಿಗಳ ಬಹುಮಾನದ ಪಂಥಾಹ್ವಾನದೊಂದಿಗೆ ದೃಷ್ಟಾಂತಗಳ ಪ್ರದರ್ಶನಕ್ಕಾಗಿ ಆಹ್ವಾನ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) "ಸದಾಖತ್ ಅನ್ವಾರ್ ಹೆಸರಿನ ಜಾಹೀರಾತು ತನ್ನ ಸುಪ್ರಸಿದ್ಧ ಗ್ರಂಥವಾದ "ಸುರ್ಮ ಚಶ್ಮ ಆರ್ಯ" ದ 309 ಪುಟದಲ್ಲಿ ಈ ಪ್ರತಾಪಶಾಲಿ ಜಾಹೀರಾತು ಪ್ರಕಟಿಸಿದ್ದರು. ಅದರಲ್ಲಿ ಅವರು ಸತ್ಯಾನ್ವೇಶಕರಾದ ಯಾರೇ ಆಗಲಿ, ಅವರಿಗೆ ದೃಷ್ಠಾಂತಗಳನ್ನು ತೋರಿಸಲು ಆಹ್ವಾನ ನೀಡಿದರು. ವಿಶೇಷವಾಗಿ ಅವರು ಕೆಲವು ಪಾದರಿಗಳ ಮತ್ತು ಆರ್ಯ ಸಾಹೇಬರುಗಳ ಹೆಸರುಗಳನ್ನು ನಮೂದಿಸಿದ್ದರು. ಆ ವ್ಯಕ್ತಿಗಳು ಈ ಜಾಹಿರಾತಿಗೆ ಮೊದಲ ಸಂಬೋಧಕರಾಗಿದ್ದಾರೆ ಮತ್ತು ಅವರೊಂದಿಗಿನ ಎಲ್ಲ ತರ್ಕಗಳನ್ನು ಕೊನೆಗಾಣಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಅವರು 40 ದಿನಗಳ ಅವದಿಯನ್ನು ನಿಗದಿಪಡಿಸಿದರು. ಈ ಅವಧಿಯಲ್ಲಿ ಯಾವುದೇ ದೃಷ್ಟಾಂತ ತೋರಿಸದಿದ್ದರೆ ಐದು ನೂರು ರೂಪಾಯಿಗಳನ್ನು ತಕ್ಷಣದಿಂದ ಪಾವತಿಸುವ ವಚನ ನೀಡಿದರು. ತಮ್ಮ ಎದುರಾಳಿಗಳಿಗೆ ದೃಷ್ಠಾಂತ ತೋರಿಸಿಕೊಟ್ಟರೆ ಕೇವಲ ಮುಸಲ್ಮಾರಾಗಲು ಶರತ್ತು ಒಡ್ಡಿದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಆ ವೈಭವಶಾಲಿ ಜಾಹಿರಾತು ಹೇಗಿತ್ತು ನೋಡಿರಿ.

ಅವರು ಹೇಳುತ್ತಾರೆ. "ನಮ್ಮ ಹಿಂದಿನ ಜಾಹಿರಾತುಗಳನ್ನು ಓದಿದವರು ತಿಳಿದಿರುತ್ತಾರೆ, ನಾವು ಇದಕ್ಕಿಂತ ಮುಂಚೆ ಹೀಗೊಂದು ಜಾಹಿರಾತು ನೀಡಿದ್ದೆವು. ಗೌರವಾನ್ವಿತ ಆರ್ಯರು, ಪಾದರಿಯರು, ಅಥವಾ ಇಸ್ಲಾಮ್ ವಿರೋಧಿಯಾದ ಯಾರೇ ಆಗಲಿ ಒಂದು ವರ್ಷದವರೆಗೆ ಖಾದಿಯಾನಿನಲ್ಲಿ ಬಂದು ನಮ್ಮ ಬಳಿ ವಾಸಿಸಿದರೆ, ಯಾವುದೆ ದೃಷ್ಟಾಂತ ಈ ಅವಧಿಯೊಳಗೆ ಕಾಣದಿದ್ದರೆ ಎರಡು ಸಾವಿರದ ನಾಲ್ಕು ನೂರು ರೂಪಾಯಿಗಳು ನಗದು ಪಡೆಯುವವರು. ಹೀಗೆ ಎಷ್ಟೇ ಸಲ ನಾವು ಭಾರತದಾದ್ಯಂತ ಹಾಗೂ ಪಂಜಾಬಿನ ಪಾದರಿಗಳ ಆರ್ಯ ಸಾಹೇಬರುಗಳ ಮುಂದೆ ಅದೇ ರೀತಿಯ ಜಾಹೀರಾತು ರಿಜಿಸ್ಟ್ರಾರ್ ಮಾಡಿಸಿ ಕಳುಹಿಸಿದರೂ ಯಾರೊಬ್ಬರೂ ಖಾದಿಯಾನ್‌ಗೆ ತೆರಳಲಿಲ್ಲ. ಅಲ್ಲದೆ ಮುನ್ನಿ ಇಂದರ್‌ಮನ್ ಸಾಹೇಬರಿಗೆ ರೂ. 2,400/– ನಗದು ಲಾಹೋರಿಗೆ ಕಳುಹಿಸಿದರೂ ಅವರು ನಿಗಾವಹಿಸಿದರೆ ಫರೀದ್‌ಕೋಟ್ ಹೋಗಿಬಿಟ್ಟರು. ಹೌದು ಪಂಡಿತ್ ಲೇಖರಾಮ್ ಸಾಹೇಬರೊಬ್ಬರು ಪೇಶಾವರ್‌ನಿಂದ ಖಾದಿಯಾನ್‌ಗೆ ಅವಶ್ಯವಾಗಿ ಬಂದಿದ್ದರು. ಅವರಿಗೆ ಪದೇ ಪದೆ ಹೇಳಲಾಯಿತು. ನಿಮಗೆ ಪೇಶಾವರ್‌ನಲ್ಲಿ ದೊರೆಯುತ್ತಿದ್ದಂತಹ ಸಂಬಳ ನಿಮಗೆ ಒದಗಿಸಿಕೊಡುತ್ತೇವೆ. ನೀವೇ ಅದರ ಪ್ರಕಾರ ತಿಂಗಳಿಗೊಮ್ಮೆ ಪಡೆದುಕೊಳ್ಳಿರಿ. ಅಂತಿಮವಾಗಿ ಹೀಗೂ ಹೇಳಲಾಯಿತು. ಒಂದು ವರ್ಷ ಆಗಲಿಲ್ಲವಾದರೆ 40 ದಿನದವರೆಗೆ ಆದರೂ ನಿಲ್ಲಿರಿ. ಅವರು ಈ ಎರಡನ್ನೂ ಒಪ್ಪಲಿಲ್ಲ. ಅದರೆ ವಿರೋಧದಲ್ಲಿ ಸುಳ್ಳು ವಿಷಯನ್ನೊಳಗೊಂಡ ಜಾಹೀರಾತು ಪ್ರಕಟಿಸಿದರು. ಆದುದರಿಂದ ಅವರಿಗಾಗಿ ಸುರ್ಮ ಚಶ್ಮ ಆರ್ಯ ಪತ್ರಿಕೆಯಲ್ಲಿ ಮತ್ತೊಮ್ಮೆ ಅದೇ 40 ದಿನದವರೆಗೆ ಇರಲು ಬರೆಯಲಾಯಿತು. ಓದುಗರು ಅದನ್ನು ಓದಬಹುದು. ಆದರೆ ಈ ಜಾಹೀರಾತು ತಾರ್ಕಿಕ ಮಟ್ಟಕ್ಕೆ ತಲುಪಿಸಲು ಮುನ್ನಿ ಜೀವನ್‌ದಾಸ್ ಸಾಹಿಬ್ ಅವರು ಎಲ್ಲ ಆರ್ಯರಲ್ಲಿ ತುಸು ಸಜ್ಜನ ಪ್ರವೃತ್ತಿಯವರಾಗಿದ್ದರು. ಅವರಿಗೆ ಮತ್ತು ಲಾಲಾಧರ ಮರಳಿಧರ್ ಸಾಹಿಬ್ ಕಲಾ ಶಿಕ್ಷಕರು, ಹೋಶಿಯಾರ್‌ಪುರ ಅವರು ಸಹ ನನ್ನ ದೃಷ್ಟಿಯಲ್ಲಿ ಇನ್ನಿತರ ಆರ್ಯರಲ್ಲಿ ಒಳ್ಳೆಯವರಾಗಿದ್ದರು. ಮುನ್ನಿ ಇಂದರ್‌ಮನ್ ಸಾಹಿಬ್ ಮುರಾದಾಬಾದಿ ಅವರು ಸೋರಸ್ತಿ ಸಾಹಿಬರ ಬದಲಿ ರೂಪದಂತಿದ್ದರು. ಮಿಸ್ಟರ್ ಅಬ್ದುಲ್ಲಾ ಆಥಮ್ ಸಾಹಿಬ್ ಮಾಜಿ ಹೆಚ್ಚುವರಿ Asst commissioner ರಮೀಸ್ ಅಮೃತಸರ್ ಅವರು ಕ್ರೈಸ್ತರಲ್ಲಿ ಸಜ್ಜನ ಸ್ವಭಾವದವರಾಗಿದ್ದರು. ಪಾದರಿ ಇಮಾಮುದ್ದೀನ್ ಸಾಹಿಬ್ ಅಮೃತಸರಿ ಪಾದರಿ ಠಾಕೂರ್‌ದಾಸ್ ಸಾಹಿಬ್ ರವರಲ್ಲಿ ಗ್ರಂಥಕರ್ತನಾದ ನಾನು ಭಿನ್ನವಿಸಿಕೊಳ್ಳುವುದೇನೆಂದರೆ ಇದೀಗ ನಾವು ಒಂದು ವರ್ಷದ ಬದಲಿಗೆ ಕೇವಲ 40 ದಿನಗಳನ್ನು ಈ ಶರತ್ತಿನ ಮೇಲೆ ಆಹ್ವಾನಿಸುತ್ತೇವೆ. ಯಾರೇ ಮಹನಿಯರು ನಮ್ಮನ್ನು ಪರೀಕ್ಷಿಸುವ ದೃಷ್ಟಿಯಿಂದ ಅಥವಾ ಸ್ಪರ್ಧಾ ದೃಷ್ಟಿಯಿಂದ ಬಂದು 40 ದಿನಗಳವರೆಗೆ ನಮ್ಮ ಬಳಿ ಖಾದಿಯಾನಿನಲ್ಲಿ ಅಥವಾ ತಮ್ಮ ಬಯಕೆ ಪ್ರಕಾರ ತಾವು ಎಲ್ಲಿ ಇರಬಯಸುತ್ತೀರೋ ಅಲ್ಲಿ ಇರಬಹುದು, ಪ್ರಮಾಣಿಕತೆಯಿಂದ ಅಲ್ಲಿ ಹಾಜರಿರಬೇಕು. ಈ ಅವಧಿಯಲ್ಲಿ ನಾವು ಯಾವುದೇ ಅಧ್ಬುತ ಕುರುಹು (ದೃಷ್ಠಾಂತ) ಪ್ರಸ್ತುತ ಪಡಿಸದಿದ್ದರೆ ಅಥವಾ ಪ್ರಸ್ತುತಪಡಿಸಿದ ನಂತರ ಅದು ಸುಳ್ಳಾದರೆ ಅಥವಾ ಅದು ಸುಳ್ಳಾಗದಿದ್ದರೆ, ಅದೇ ರೀತಿ ನಮ್ಮನ್ನು ಪರೀಕ್ಷಿಸುವವರು ಸಹ ಅದನ್ನು ಎದುರಿಸಿ ತೋರಿಸಿದರೆ ರೂ. 500/– ನಗದು ಪರಾಜಿತರಾದ ಸಂದರ್ಭದಲ್ಲಿ ತಡಮಾಡದೆ ಅವರಿಗೆ ನೀಡಲಾಗುವುದು. ಆದರೆ ಆ ಭವಿಷ್ಯವಾಣಿ ಸತ್ಯ ಎಂದಾದರೆ ಎದುರಾಳಿಯಾದವನಿಗೆ ಇಸ್ಲಾಮ್ ಸ್ವೀಕರಿಸಬೇಕಾಗುವುದು ಮತ್ತು ಈ ಮಾತು ಅವಶ್ಯವಾಗಿ ನೆನಪಿಡತಕ್ಕದ್ದಾಗಿದೆ. ಭವಿಷ್ಯವಾಣಿಗಳಲ್ಲಿ ಕೇವಲ ಮೌಖಿಕವಾಗಿ ಆರೋಪಿಸುವುದಾಗಲಿ ಅಥವಾ ತಮ್ಮ ಕಡೆಯಿಂದ ಶರತ್ತುಗಳನ್ನು ಒಡ್ಡುವುದು ಅಸಮ್ಮತ ಹಾಗೂ ಅನಧಿಕೃತವಾಗಿರುವುದು, ಬದಲು ಭವಿಷ್ಯವಾಣಿಯ ಸತ್ಯವನ್ನು ನೇರವಾಗಿ ಗುರುತಿಸುವ ವಿಧಾನ ಇದೇ ಆಗಿರುವುದು, ಭವಿಷ್ಯವಾಣಿ ಮಾಡುವವರು ಎದುರಾಳಿಯ ದೃಷ್ಟಿಯಲ್ಲಿ ದುರ್ಬಲವಾಗಿದ್ದರೆ ಅಥವಾ ಸಂಶಯಾತ್ಮಕವಾದರೆ ಅಥವಾ ಅವರ ದೃಷ್ಟಿಯಲ್ಲಿ ಅಂದಾಜು ಭಾವನೆ ಎಂತಾದರೆ ಅದೆ ಅವಧಿಯ ಒಳಗೆ ಅಂದರೆ 40 ದಿನಗಳ ಒಳಗೆ ಅವರು ಸಹ ಅಂತಹ ಭವಿಷ್ಯವಾಣಿ ಪುರಾವೆ ಸಹಿತ ತೋರಿಸಬೇಕು, ಎದುರಾಳಿಯು ಅದರಿಂದ ವಿವಶರಾದರೆ ಅದು ಅವರ ಮೇಲೆ ತರ್ಕಪೂರ್ಣವಾಗಿದ್ದರೆ, ಭವಿಷ್ಯವಾಣಿ ಸತ್ಯವಾದ ಪರಿಣಾಮ ಅವರಿಗೆ ಮುಸಲ್ಮಾನನಾಗಬೇಕಾಗುವುದು. ಈ ಬರವಣಿಗೆಗಳು ಮುಂಚಿತವಾಗಿಯೇ ಉಭಯತ್ರರೂ ಬರೆದು ಪ್ರಕಟಪಡಿಸಬೇಕು. ಈ ಪತ್ರಿಕೆ ಪ್ರಕಟವಾಗುವ ಸಮಯ ಅಂದರೆ 20 ಸೆಪ್ಟೆಂಬರ್ 1886 ರಿಂದ ಸರಿಯಾಗಿ ಮೂರು ತಿಂಗಳ ಅವಧಿ ಆ ಸಾಹೇಬರಿಗೆ ನೀಡಲಾಗುವುದು, ಈ ಅವದಿಯಲ್ಲಿ ಅವರ ಕಡೆಯಿಂದ ಸ್ಪರ್ಧಿಸಲು ಯಾವುದೇ ಹಿತಕರ ಬೆಳವಣಿಗೆಗೆ ಕಾಣಸಿಗದಿದ್ದರೆ ಅವರು ಪಲಾಯನ ಮಾಡುವರಾಗಿದ್ದರೆಂದು ಭಾವಿಸಲಾಗುವುದು. **ವಸ್ಸಲಾಮು ಆರಾ ಮನಿತ್ತಬಅಲ್ ಹುದಾ** (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯಿನ್ ಸಂಪುಟ 2 ಪುಟ 309)

ಒಂದು ವರ್ಷದವರೆಗೆ ಖಾದಿಯಾನಿನಲ್ಲಿ ನೆಲೆಸಿ ದೃಷ್ಟಾಂತ ನೋಡುವ ಕುರಿತದ ಜಾಹಿರಾತಿನ ವಿವರ "ಮಿಜ್‌ಮಿನಲ್ ಇಶ್‌ತಿಹಾರಾತ್ ಸಂಪುಟ ಒಂದು ಸಂಚಿಕೆ 1889 ರ ಪುಟ 20 ಮತ್ತು ಸಂಚಿಕೆ (addition) 2019 ರ ಪುಟ 30 ರಲ್ಲಿ ಕಾಣಬಹುದು. ಈ ಜಾಹಿರಾತು ಹಝ್ರತ್ ಮಸೀಹ್ ಮೌಊದ್(ಅ) ಅವರು ಎಂಟು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಇಂಗ್ಲೀಷ್ ಮತ್ತು ಉರ್ದುವಿನಲ್ಲಿ ಪ್ರಕಟಿಸಿ, ಪಂಜಾಬ್, ಭಾರತದಾಧ್ಯಂತ ಹಾಗೂ ಇಂಗ್ಲೆಂಡಿನ ಸುಪ್ರಸಿದ್ಧ ಪಾದರಿಗಳಿಗೆ ಹಾಗೂ ಗೌರವಾನ್ವಿತ ಬ್ರಹ್ಮೊ, ಆರ್ಯ, ನೇಚರಿ, ಹಾಗೂ ಮೌಲ್ವಿಗಳಿಗೆ ಕಳುಹಿಸಿದ್ದರು.

ಅವರು ಜಾಹಿರಾತಿನಲ್ಲಿ ಪ್ರಕಟಿಸಿದ್ದರು. ಓ ಅಲ್ಲಾಹನ ಅಣತಿ ಮೇರೆಗೆ ಇರುವ ಧರ್ಮ ಕೇವಲ ಇಸ್ಲಾಮ್ ಧರ್ಮವಾಗಿದೆ ಮತ್ತು ಸತ್ಯವಾದ ಪಂಥ ಅದು ಅಲ್ಲಾಹನಿಂದ ಅವತರಿಸಿ ಸುರಕ್ಷಿತವಾಗಿದೆ ಮತ್ತು ಸರ್ವ ಕಾಲಿಕವಾದುದು ಕೇವಲ ಖುರ್‌ಆನ್ ಆಗಿದೆ. ಈ ಧರ್ಮದ ಸಾಕ್ಷ್ಯಗಳಿಗೆ ಮತ್ತು ಖುರ್‌ಆನ್ ಸಾಕ್ಷ್ಯಗಳಿಗೆ ಬೌದ್ಧಿಕ ಪುರಾವೆಗಳಲ್ಲದೆ ದೈವಿಕ ಪುರಾವೆಗಳು ಸಹ ಒಳಗೊಂಡಿದೆ. ಅದನ್ನು ಸತ್ಯಾನ್ವೇಷಕರು ಈ ವಿನೀತನ ಸಹವಾಸದಲ್ಲಿದ್ದು ತಾಳ್ಮೆವಹಿಸಿ ಸ್ವಯಂ ಅನುಭವಿಸಿ ಸಾಕ್ಷಿ ನೀಡಬಹುದಾಗಿದೆ. ನಿಮಗೆ ಈ ಧರ್ಮದ ಸತ್ಯತೆ ಅಥವಾ ಆ ದೈವಿಕ ದೃಷ್ಟಾಂತಗಳ ಕುರಿತು ಸಂಶಯಗಳಿದ್ದರೆ ಸತ್ಯಾನ್ವೇಷಕರಾಗಿ ಖಾದಿಯಾನ್‌ಗೆ ಆಗಮಿಸಿರಿ ಮತ್ತು ಒಂದು ವರ್ಷದವರೆಗೆ ಈ ವಿನೀತನ ಸಹವಾಸದಲ್ಲಿದ್ದು ಆ ದೈವಿಕ ದೃಷ್ಟಾಂತಗಳನ್ನು ಸ್ವಯಂ ತನ್ನ ಕಣ್ಣಿನಿಂದ ನೋಡಬಹುದಾಗಿದೆ. ಈ ಕಾರ್ಯಕ್ಕಾಗಿ ಅಲ್ಲಾಹನ ವಾಗ್ದಾನ ಪಡೆಯಲಾಗಿರುತ್ತದೆ. ಅದರಲ್ಲಿ ತಪ್ಪುವ ಸಾಧ್ಯತೆಯಿಲ್ಲ. ನೀವು ಆಗಮಿಸಲಿಲ್ಲವಾದರೆ ನೀವು ಅಲ್ಲಾಹನಿಗೆ ಜವಾಬ್ದಾರರಾಗುವಿರಿ. ನೀವು ಬಂದು ಒಂದು ವರ್ಷದ ತನಕವಿದ್ದು ಯಾವುದೇ ದೈವಿಕ ದೃಷ್ಟಾಂತ ಕಾಣದಾದರೆ ತಿಂಗಳಿಗೆ ಎರಡು ನೂರು ರೂಪಾಯಿಗಳು ಮಾಸಿಕ ಲೆಕ್ಕದಲ್ಲಿ ನಿಮಗೆ ದಂಡರೂಪದಲ್ಲಿ ಅಥವಾ ಪರಿಹಾರ ರೂಪದಲ್ಲಿ ಕೊಡಲಾಗುವುದು. ಈ ಎರಡು ನೂರು ರೂಪಾಯಿಗಳು ಮಾಸಿಕ ನಿಮ್ಮ ಘನತೆಗೆ ತಕ್ಕುದಾದದ್ದು ಅಲ್ಲ ಎಂದಾದರೆ ನಿಮ್ಮ ಸಮಯ ವ್ಯರ್ಥ ಆದಕಾರಣ ಅಥವಾ ವಾಗ್ದಾನ ಈಡೇರದಿದ್ದ ದಂಡವು ನೀವು ಬಯಸಿದ ಹಾಗೆ ಕೊಡಲು ನಾವು ಒಪ್ಪುವೆವು. ಒಂದು ವೇಳೆ ನೀವು ಸ್ವತಃ ಆಗಮಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ನಿಮ್ಮ ಪ್ರತಿನಿಧಿಯಾಗಿ ಯಾರಾದರು ನಿಮ್ಮ ನಂಬಿಗಸ್ಥನಿಗೆ ಕಳುಹಿಸ ಬಹುದಾಗಿದೆ."

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೇವಲ ಒಂದು ಸಲ ಅಲ್ಲ, ಬದಲು ಪದೇ ಪದೇ ದೃಷ್ಠಾಂತ ಕಾಣಲು ಆಹ್ವಾನಿಸಿದರು ಮತ್ತು ಅದನ್ನು ಸಾರ್ವಜನಿಕವಾಗಿ ಘೋಷಣೆ ಮಾಡಿದರು. ಅವರ ಹೃದಯದಲ್ಲಿ ಈ ರೀತಿಯಾದರೂ ಯಾರೊಬ್ಬರು ವಿಶ್ವಾಸ ಪಡೆಯಬಹುದು ಮುಸಲ್ಮಾನ ನಾಗಬಹುದು ಎಂಬ ಕಳಕಳಿಯಿತ್ತು. ಅದೇ ಕಾರಣದಿಂದ ತಮ್ಮ ಎದುರಾಳಿ ವಿಜಯ ಸಾಧಿಸಿದ ವಿಪಲಗೊಂಡಲ್ಲಿ ಕೇವಲ ಮುಸಲ್ಮಾನನಾಗುವ ಶರತ್ತು ವಿಧಿಸಿದರು. ಈ ಕೆಳಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರು ಅತ್ಯಂತ ವೈಭವಶಾಲಿ ರೀತಿಯಲ್ಲಿ ಬರೆದ ಅಧ್ಯಾಪನೆಗಳು, ದೃಷ್ಟಾಂತಗಳನ್ನು ಕಾಣಲು ಕುರಿತಾದದ್ದು ಪ್ರಸ್ತುತಪಡಿಸುತ್ತೇವೆ.

**ಜಮ್ಮು ರಾಜ್ಯ್ಯದ ಡಾ॥ ಜಗನ್ನಾಥ ಸಾಹಿಬ್ ಲೆಫ್ಟೆನೆಂಟ್ ಅವರನ್ನು ದೃಷ್ಟಾಂತ ತೋರಿಸಲು ಆಹ್ವಾನ ನೀಡುತ್ತ ಹೇಳಿದರು.**

ನೀವು ನಿಸ್ಸಂಶಯವಾಗಿ ದೃಷ್ಟಾಂತ ನೋಡಿ ಸತ್ಯ ಹೃದಯದಿಂದ ಮುಸಲ್ಮಾನರಾಗಲು ಸಿದ್ಧರಿದ್ದರೆ ಪ್ರಮಾಣ ಮಾಡಿ ಈ ಹೇಳಿಕೆ ತನ್ನ ಕಡೆಯಿಂದ ಪ್ರಕಟಣೆ ನೀಡಿ. ನಾನು ಇಸ್ಲಾಮಿನ ಪರವಾಗಿ ಯಾವುದೇ ದೃಷ್ಟಾಂತ ಕಾಣುವುದಾದರೆ, ಅದರ ಮಾದರಿ ತೋರಿಸಲು ನಾನು ವಿವಶನಾದರೆ, ಮಾನವಶಕ್ತಿ ಸಾಮರ್ಥ್ಯಗಳಲ್ಲಿ ಅಂತಹದೊಂದು ಮಾದರಿ ಎಲ್ಲ ಶರತ್ತುಗಳೊಂದಿಗೆ ತೋರಿಸಲು ಅಸಫಲನಾದರೆ ನಾನು ತಡಮಾದೆ ಮುಸಲ್ಮಾನನಾಗುವೆ." ನಾನು ವಿಫಲಗೊಂಡರೆ ಡಾ॥ ಸಾಹಿಬ್ ಯಾವ ಶಿಕ್ಷೆ ಹಾಗೂ ದಂಡ ನನ್ನ ಸಾಮರ್ಥ್ಯ ಮೇರೆಗೆ ನೀವು ನಿಗದಿಪಡಿಸುವಿರೋ ಅದು ನನಗೆ ಒಪ್ಪಿಗೆಯಾಗಿರುತ್ತದೆ. ನಾನು ಪರಾಜಿತಗೊಂಡರೆ ಮರಣದಂಡನೆ

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪ್ರತಿ ಪ್ರವಾದಿಗೂಒಬ್ಬ ವಿಶಿಷ್ಟ ಶಿಷ್ಯನೂ ಗೆಳೆಯನೂ ಇರುತ್ತಾನೆ. ನನ್ನ ಹವಾರಿ ಝುಬೈರ್ ಆಗಿರುವನು.**

ಪ್ರವಾದಿ ಮುಹಮ್ಮದ್(ಸ)ರವರ ಹವಾರಿ ಹಾಗೂ ನಿಷ್ಠೆಯ ಸಂಬಂಧ ಹೋಂದಿದ ಬದರಿ ಸಹಾಬಿಯಾದ ಹಝ್ರತ್ ಝುಬೈರ್ ಬಿನ್ ಅವಾಮ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.

**ಇತ್ತೀಚೆಗೆ ನಿಧನ ಹೊಂದಿದ ಮೂರು ದಿವಂಗತರು ಮುಕರ್‍ರಮ್ ಮೇರಾಜ್ ಅಹ್ಮದ್ ಸಾಹಿಬ್ ಶಹೀದ್, ಮುಕರ್‍ರಮ್ ಅದೀಬ್ ಅಹ್ಮದ್ ಸಾಹಿಬ್ ನಾಸಿರ್ ಮುರಬ್ಬಿ ಸಿಲ್‌ಸಿಲ, ಹಾಗೂ ಮುಕರ್‍ರಮ್ ಹಮೀದ್ ಅಹ್ಮದ್ ಶೇಖ್ ಸಾಹಿಬ್ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಮತ್ತು ಅವರೆಲ್ಲರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21–08–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ - اَلرَّحْمٰنِ الرَّحِيْمِ - مٰلِكِ يَوْمِ الدِّيْنِ -

اِيَّاكَ نَعْبُدُ وَاِيَّاكَ نَسْتَعِيْنُ - اِهْدِنَا الصِّرَاطَ الْمُسْتَقِيْمَ -

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ -

ಇಂದು ಪ್ರಸ್ತಾಪಿಸಲಾಗುವ ಸಹಾಬಿಯ ಹೆಸರು ಹಝ್ರತ್ ಝುಬೈರ್ ಬಿನ್ ಅವಾಮ್ ಎಂದಾಗಿದೆ. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರ ತಂದೆಯ ಹೆಸರು ಅವಾಮ್ ಬಿನ್ ಖುವೈಲಿದ್ ಎಂದಾಗಿತ್ತು. ತಾಯಿಯ ಹೆಸರು ಸಫಿಯಾ ಬಿನ್ತ್ ಅಬ್ದುಲ್ ಮುತ್ತಲಿಬ್ ಎಂದಾಗಿತ್ತು. ಅವರ ತಾಯಿಯು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತಂದೆಯ ಸಹೋದರಿಯಾಗಿದ್ದರು. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರ ವಂಶ ಪರಂಪರೆ ಖುಸಿ ಬಿನ್ ಕಲಾಬ್‌ರಿಗೆ ತಲುಪಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸೇರುತ್ತದೆ. ಝುಬೈರ್ ರಝಿಯಲ್ಲಾಹು ಅನ್‌ಹು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿಯಾದ ಹಝ್ರತ್ ಖದೀಜ ರಝಿಯಲ್ಲಾಹು ಅನ್‌ಹುರ ಸೋದರ ಪುತ್ರರಾಗಿದ್ದರು. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರ ವಿವಾಹ ಹಝ್ರತ್ ಅಬೂಬಕ್ಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರ ಮಗಳಾದ ಹಝ್ರತ್ ಅಸ್ಮಾರೊಂದಿಗೆ(ರ) ನಡೆದಿತ್ತು. ಹಝ್ರತ್ ಅಬೂಬಕ್ಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರ ಮಗಳಾದ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರ ವಿವಾಹ ಹಝ್ರತ್ ಪೈಗಂಬರ್ ಸಲ್ಲಲ್ಲಾಹಲು ಅಲೈಹಿ ವಸಲ್ಲಮರೊಂದಿಗೆ ನಡೆದಿತ್ತು. ಹೀಗೆ ಹಝ್ರತ್ ಝುಬೈರ್(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಾಡು ಆಗಿದ್ದರು, ಎಂದರೆ, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿಯ ಸಹೋದರಿಯ ಪತಿಯಾಗಿದ್ದರು. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಈ ರೀತಿಯ ಸಂಬಂಧಗಳಿವೆ. ಅವರ ಉಪನಾಮ ಅಬ್ದುಲ್ಲಾಹ್ ಎಂದಾಗಿದೆ. ಆದರೆ ಅವರ ತಾಯಿಯಾಗಿದ್ದ ಹಝ್ರತ್ ಸಫಿಯಾ ರಝಿಯಲ್ಲಾಹು ಅನ್‌ಹು ತಮ್ಮ ಸಹೋದರನಾದ ಝುಬೈರ್ ಬಿನ್ ಅಬ್ದುಲ್ ಮುತ್ತಲಿಬ್‌ರ ಉಪನಾಮವಾದ ಅಬೂತಾಹಿರ್ ಎಂಬ ಹೆಸರನ್ನು ತನ್ನ ಮಗನಾದ ಹಝ್ರತ್ ಝುಬೈರಿಗೆ ಇಟ್ಟರು. ತದನಂತರ ಹಝ್ರತ್ ಝುಬೈರ್ ರಝಿಯಲ್ಲಾಹು ತನ್ನ ಉಪನಾಮವನ್ನು ತನ್ನ ಮಗನಾದ ಅಬ್ದುಲ್ಲಾಹ್‌ರ ಹೆಸರಿನಲ್ಲಿ ಅಬೂ ಅಬ್ದುಲ್ಲಾಹ್ ಎಂದು ಇಟ್ಟರು. ಆ ಹೆಸರು ಅನಂತರ ಪ್ರಸಿದ್ಧಿ ಪಡೆಯಿತು. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ನಂತರ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದರು. ಇಸ್ಲಾಮ್ ಸ್ವೀಕರಿಸುವವರಲ್ಲಿ ಅವರು ನಾಲ್ಕನೇ ಅಥವಾ ಐದನೇಯ ವ್ಯಕ್ತಿಯಾಗಿದ್ದರು. ಹಝ್ರತ್ ಝುಬೈರ್(ರ) 12ನೇ ವಯಸ್ಸಿನಲ್ಲಿ ಮತ್ತು ಕೆಲವು ವರದಿಗಳ ಪ್ರಕಾರ 8 ಅಥವಾ 16 ವಯಸ್ಸಿನಲ್ಲಿ ಇಸ್ಲಾಮ್ ಧರ್ಮ ಸ್ವೀಕರಿಸಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಜೀವಿತದಲ್ಲೇ ಸ್ವರ್ಗದ ಸುವಾರ್ತೆ ನೀಡಿದ 10 ಸೌಭಾಗ್ಯಶಾಲಿಗಳಲ್ಲಿ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಒಬ್ಬರಾಗಿದ್ದರು. ಅದೇ ರೀತಿಯಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ತಮ್ಮ ಮರಣಕ್ಕೆ ಮುಂಚಿತವಾಗಿ ಮುಂದಿನ ಖಲೀಫರನ್ನು ಆಯ್ಕೆ ಮಾಡಲುನಾಮ ನಿರ್ದೇಶಿಸಿದ್ದ 'ಶೂರಾ'ದ 6 ಸದಸ್ಯರಲ್ಲಿ ಇವರು ಒಬ್ಬರಾಗಿದ್ದರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–2, ಪುಟ–307, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003) (ಅಲ್‌ಅಸಾಬ ಫೀ ತಮೀಝೀಸ್ಸಹಾಬ, ಸಂಪುಟ–2, ಪುಟ–457, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995) (ಸೈರುಸ್ಸಹಾಬ, ಸಂಪುಟ–2, ಪುಟ–67, ದಾರುಲ್ ಇಶಾಅತ್ ಕರಾಚಿ)

ಹಝ್ರತ್ ಝುಬೈರರ ತಂದೆಯಾದ ಅವಾಮ್ ನಿಧನರಾದಾಗ ನೌಫಲ್ ಬಿನ್ ಖುವೈಲಿದ್ ತನ್ನ ಸೋದರ ಪುತ್ರನಾದ ಝುಬೈರಿನ ಪಾಲನೆ ಪೋಷಣೆ ಮಾಡುತ್ತಿದ್ದರು. ಹಝ್ರತ್ ಝುಬೈರಿನ ತಾಯಿಯಾದ ಹಝ್ರತ್ ಸಫಿಯಾ ರಝಿಯಲ್ಲಾಹು ಅನ್‌ಹಾ ಹಝ್ರತ್ ಝುಬೈರನ್ನು ಚಿಕ್ಕವನಿದ್ದಾಗ ಬಹಳ ಹೊಡೆಯುತ್ತಿದ್ದರು ಅಥವಾ ಗದರಿಸುತ್ತಿದ್ದರು. ನೀನು ನಿನ್ನ ಮಗನನ್ನು ಅವನೊಡನೆ ಅಸಂತುಷ್ಟಿಯಿರುವ ರೀತಿಯಲ್ಲಿ ಏಕೆ ಹೊಡೆಯುತ್ತಿಯಾ ಮತ್ತು ಕಠಿಣವಾಗಿ ವರ್ತಿಸುತ್ತಿಯಾ ಎಂದು ಹಝ್ರತ್ ಝುಬೈರಿನ ಚಿಕ್ಕಪ್ಪ ಹಝ್ರತ್ ಸಫಿಯಾರೊಡನೆ ಕೇಳುತ್ತಿದ್ದರು. ಆಗ ಹಝ್ರತ್ ಸಫಿಯಾ ರಝಿಯಲ್ಲಾಹು ಅನ್‌ಹು ಅದಕ್ಕೆ ಉತ್ತರವಾಗಿ ಈ ಪದ್ಯದ ಸಾಲುಗಳನ್ನು ಓದಿದಳು:

**ಮನ್‌ಖಾಲ ಇನ್ನೀ ಅಬ್‌ಗ಼ಝುಹು ಫಖದ್ ಕಝಿಬ್,**
**ವ ಇನ್ನಮಾ ಅಝ್ರಿಬುಹು ಲಿಕೈ ಯಲಬ್**
**ವಯಹ್‌ಝಿಮಲ್ ಜೈಶ ವಯ್‌ತೀ ಬಿಸ್ಸಲಬ್**
**ವಲಾ ಯಕುನ್ ಲಿಮಾಲಿಹಿ ಖ಼ಬ್‌ಅನ್ ಮಖ಼ಬ್,**
**ಯಅ್‌ಕುಲು ಫಿಲ್ ಬೈತಿ ಮಿನ್ ತಮರಿ ವಹಬ್.**

ಎಂದರೆ, ನಾನು ಅವನಲ್ಲಿ ಕೋಪಗೊಂಡಿದ್ದೇನೆ ಎಂದು ಭಾವಿಸುವವರು ಸುಳ್ಳು ಹೇಳುತ್ತಾರೆ. ಅವನು ಧೈರ್ಯವಂತನಾಗಲು, ಸೈನ್ಯಗಳನ್ನು ಪರಾಜಿತಗೊಳಿಸಲು, ಕೊಲ್ಲಲ್ಪಟ್ಟವರ ಸಾಮಾನುಗಳನ್ನು ತೆಗೆದು ಮರಳುವಂತಾಗಲು, ಖರ್ಜೂರ ಮತ್ತು ಧಾನ್ಯಗಳನ್ನು ಮಾತ್ರ ತಿಂದು ತನ್ನ ಸಂಪತ್ತಿಗಾಗಿ ಅವಿತು ಕುಳಿತುಕೊಳ್ಳದಿರಲು ನಾನು ಅವನನ್ನು ಹೊಡೆಯುತ್ತೇನೆ ಮತ್ತು ಅವನೊಡನೆ ಕಠಿಣವಾಗಿ ವರ್ತಿಸುತ್ತೇನೆ. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–2, ಪುಟ–458, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ಹೇಗಿದ್ದರೂ ಇದು ಅವರ ಒಂದು ಆಲೋಚನೆಯಾಗಿತ್ತು. ಅದರ ಪ್ರಕಾರ ಇದು ಹಝ್ರತ್ ಝುಬೈರನ್ನು ಶೂರನಾಗಿ ಮಾಡಲು ಅವರ ತರಬೇತಿಯ ರೀತಿಯಾಗಿತ್ತು. ಇದು ಬಹಳ ಉತ್ತಮ ರೀತಿಯೆಂದು ನಾವು ಹೇಳಬೇಕಾಗಿಲ್ಲ. ಸಾಧಾರಣವಾಗಿ ಹೀಗೆ ಮಾಡುವುದರಿಂದ ಅವರಲ್ಲಿ ಆತ್ಮವಿಶ್ವಾಸದ ಕೊರತೆ ಉಂಟಾಗುವುದಾಗಿ ನಾವಿಂದು ನೋಡುತ್ತೇವೆ. ಹೇಗಿದ್ದರೂ ಅಲ್ಲಾಹನು ಅವರನ್ನು ಆ ಹೊಡೆತ ಮತ್ತು ಕಾಠಿಣ್ಯದ ಕೆಟ್ಟ ಪ್ರಭಾವದಿಂದ ಸುರಕ್ಷಿತಗೊಳಿಸಿದ್ದನು. ತಾಯಿಯ ವಾತ್ಸಲ್ಯ ಪ್ರಸಿದ್ಧವಾಗಿರುವ ಸಂಗತಿಯಾಗಿದೆ. ಅವರ ತಾಯಿ ಅವರೊಡನೆ ಪ್ರೀತಿಯಿಂದಲೂ ವರ್ತಿಸಿ ಇರಬಹುದು. ಹೊಡೆಯುತ್ತಿದ್ದಳು ಎಂದು ಮಾತ್ರವಲ್ಲ. ಹಝ್ರತ್ ಝುಬೈರಿನಲ್ಲಿ ಶೌರ್ಯ ಮತ್ತು ಧೈರ್ಯ ಉಂಟಾಗಿತ್ತು ಎಂಬುದು ಅವರ ಅನಂತರದ ಘಟನೆಗಳಿಂದ ಸಾಬೀತಾಗುತ್ತದೆ. ಹೇಗೆ ಆಯಿತು ಎಂಬುದು ಅಲ್ಲಾಹನೇ ಬಲ್ಲನು. ಆ

ಬಾಲ್ಯದಲ್ಲಿ ಸಿಕ್ಕಿದ ಹೊಡೆತದ ಕೆಟ್ಟ ಪರಿಣಾಮವಂತು ಅವರ ಮೇಲೆ ಉಂಟಾಗಲಿಲ್ಲ. ಇಂದು ಇಲ್ಲಿ ಈ ರೀತಿಯನ್ನು ಪರೀಕ್ಷಿಸಲು ಪ್ರಯತ್ನಿಸಿದರೆ ತಕ್ಷಣವೇ ಸಮಾಜ ಸೇವಕರು ಬಂದು ಮಗುವನ್ನು ತೆಗೆದುಕೊಂಡು ಹೋಗುವರು. ಆದ್ದರಿಂದ ಈ ರೀತಿಯನ್ನು ಪರೀಕ್ಷಿಸುವ ಪ್ರಯತ್ನ ತಾಯಂದಿರು ಮಾಡದಿರಲಿ.

ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಇಸ್ಲಾಮ್ ಧರ್ಮ ಸ್ವೀಕರಿಸಿದಾಗ, ಇಸ್ಲಾಮನ್ನು ಉಪೇಕ್ಷಿಸಿ ಅವಿಶ್ವಾಸಕ್ಕೆ ಮರಳುವಂತೆ ಮಾಡಲು ಅವರ ಚಿಕ್ಕಪ್ಪ ಅವರನ್ನು ಚಾಪೆಯಲ್ಲಿ ಸುತ್ತಿ ಹೊಗೆ ಬಿಡುತ್ತಿದ್ದರು. ಆದರೆ ಇನ್ನು ಅವಿಶ್ವಾಸಕ್ಕೆ ಮರಳುವುದಿಲ್ಲ ಎಂದು ಅವರು ಹೇಳುತ್ತಾ ಇದ್ದರು.
(ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–2, ಪುಟ–457, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಝುಬೈರರ ಈ ಘಟನೆಯನ್ನು ಈ ರೀತಿಯಲ್ಲಿ ವರ್ಣಿಸಿರುವರು: ಝುಬೈರ್ ಬಿನ್ ಅವಾಮ್ ಬಹಳ ಶಕ್ತರಾದ ಧೈರ್ಯವಂತ ಯುವಕರಾಗಿದ್ದರು. ಇಸ್ಲಾಮಿನ ವಿಜಯಗಳ ಕಾಲದಲ್ಲಿ ಅವರು ಬಹಳ ದೊಡ್ಡ ಸೇನಾಧಿಪತಿಯೆಂದು ಸಾಬೀತಾಗಿತ್ತು. ಅವರ ಚಿಕ್ಕಪ್ಪ ಸಹ ಅವರಿಗೆ ತುಂಬ ಕಷ್ಟಗಳನ್ನು ಕೊಡುತ್ತಿದ್ದರು. ಅವರು ಉಸಿರುಗಟ್ಟುವಂತಾಗಲು ಅವರನ್ನು ಚಾಪೆಯಲ್ಲಿ ಸುತ್ತಿ ಹಾಕಿ ಕೆಳಗಿನಿಂದ ಹೊಗೆ ಬಿಡುತ್ತಿದ್ದರು. ಈಗಲಾದರೂ ಇಸ್ಲಾಮಿನಂದ ಮುಖ ತಿರುಗಿಸುತ್ತಿಯೋ ಇಲ್ಲವೋ ಎಂದು ಕೇಳುತ್ತಿದ್ದರು. ಅದಕ್ಕೆ ಉತ್ತರವಾಗಿ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಇಷ್ಟು ಮಾತ್ರ ಹೇಳುತ್ತಿದ್ದರು: ನಾನು ಸತ್ಯವನ್ನು ಅರಿತ ನಂತರ ಅದನ್ನು ಹೇಗೆ ನಿರಾಕರಿಸಬಲ್ಲನು? (ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–196–197)

ಹಿಶಾಮ್ ಬಿನ್ ಅರ್‌ವ ತಮ್ಮ ತಂದೆಯಿಂದ ಹೀಗೆ ವರದಿ ಮಾಡುತ್ತಾರೆ: ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಸಣ್ಣವನಾಗಿದ್ದಾಗ ಒಬ್ಬ ವ್ಯಕ್ತಿ ಅವರೊಡನೆ ಜಗಳಕ್ಕೆ ಇಳಿದನು. ಆ ವ್ಯಕ್ತಿ ಕಠಿಣವಾಗಿ ವರ್ತಿಸಿರಬಹುದು. ಇವರು ಆಗ ಸಣ್ಣವರಾಗಿದ್ದರು, ಅವನು ದೊಡ್ಡ ವ್ಯಕ್ತಿಯಾಗಿದ್ದನು. ಹೇಗಿದ್ದರೂ ಆ ಜಗಳದಲ್ಲಿ ಹಝ್ರತ್ ಝುಬೈರ್ ಆ ವ್ಯಕ್ತಿಯ ಕೈಯನ್ನು ತುಂಡು ಮಾಡಿದರು ಮತ್ತು ತೀವ್ರವಾಗಿ ಗಾಯಗೊಳಿಸಿದರು. ಆ ವ್ಯಕ್ತಿಯನ್ನು ಸವಾರಿಯಲ್ಲಿ ಇರಿಸಿ ಹಝ್ರತ್ ಸಫಿಯಾರ ಬಳಿಗೆ ತರಲಾಯಿತು. ಅವನನ್ನು ಈ ಸ್ಥಿತಿಗೆ ನಿಮ್ಮ ಮಗನು ತಲುಪಿಸಿದ್ದಾನೆ ಎಂದು ತೋರಿಸಿಕೊಡಲು ಕೊಂಡುಬರಲಾಗಿತ್ತು. ಈ ವ್ಯಕ್ತಿಗೆ ಏನಾಯಿತೆಂದು ಹಝ್ರತ್ ಸಫಿಯ ರಝಿಯಲ್ಲಾಹು ಅನ್‌ಹಾ ಕೇಳಿದರು. ನಿಮ್ಮ ಮಗ ಈ ವ್ಯಕ್ತಿಯೊಡನೆ ಜಗಳವಾಡಿದ್ದನು ಎಂದು ಜನರು ಹೇಳಿದರು. ಯಾರ ತಪ್ಪೆಂದು ಹೇಳದೆ ಕೇವಲ ಜಗಳವಾಡಿದ ಬಗ್ಗೆ ಹೇಳಿದರು. ಹಝ್ರತ್ ಸಫಿಯಾ ರಝಿಯಲ್ಲಾಹು ಅನ್‌ಹು ಹಝ್ರತ್ ಝುಬೈರರ ಈ ಶೌರ್ಯದ ಮೇಲೆ ಈ ಪದ್ಯ ಪಂಕ್ತಿಗಳನ್ನು ಓದಿದರು:

**ಕೈಫ ರಐತ ಝುಬ್‌ರ,**
**ಅಅಖಿತನ್ ಹಸಿಬ್‌ತಹು ಅಮ್ ತಮ್‌ರಾ,**
**ಅಮ್ ಮಶ್‌ಮಇಲ್ಲನ್ ಸಖ್‌ರಾ.**

ಅಂದರೆ, ನೀನು ಝುಬೈರನನ್ನು ಏನೆಂದು ಭಾವಿಸಿದ್ದೆ? ಅವನನ್ನು ಪನೀರು ಮತ್ತು ಖರ್ಜೂರವೆಂದು ತಿಳಿದು, ಸುಲಭವಾಗಿ ತಿನ್ನಬಹುದೆಂದು ಮತ್ತು ಇಷ್ಟಬಂದಂತೆ ಮಾಡಬಹುದೆಂದು ಭಾವಿಸಿದ್ದೀಯ? ಅವನು ಕ್ಷಿಪ್ರಗತಿಯಲ್ಲಿ ದಾಳಿ ಮಾಡುವ ರಣಹದ್ದಿನ ಹಾಗೆ ಆಗಿರುವನು. ನೀನು ಅವನನ್ನು ಥಟ್ಟನೆ ಹಲ್ಲೆ ಮಾಡುವ ರಣಹದ್ದಿನ ಹಾಗೆ ಕಂಡಿರಬಹುದು.
(ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–74–75, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಝುಬೈರ್‌ರಝಿಯಲ್ಲಾಹು ಅನ್‌ಹು ಹಬ್ಶಾ ಕಡೆಗೆ ಮಾಡಲಾದ ಎರಡು ಹಿಜ್‌ರತ್‌ಗಳಲ್ಲೂ ಇದ್ದರು. ಅದೇ ರೀತಿಯಲ್ಲಿ ಅವರು ವಲಸೆ ಮಾಡಿ ಮದೀನಕ್ಕೆ ಬಂದಾಗ ಹಝ್ರತ್ ಮುಂಝಿರ್ ಬಿನ್ ಮುಹಮ್ಮದ್ ಬಳಿಯಲ್ಲಿ ವಾಸಮಾಡಿದ್ದರು. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–75, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರ ಪತ್ನಿಯಾದ ಅಸ್ಮಾ ರಝಿಯಲ್ಲಾಹು ಅನ್‌ಹಾ ವರದಿ ಮಾಡುತ್ತಾಳೆ: "ನಾನು ಮಕ್ಕದಿಂದ ಹಿಜ್‌ರತ್ ಮಾಡಿ ಹೊರಡುವ ಸಮಯದಲ್ಲಿ ನಾನು ಗರ್ಭಿಣಿಯಾಗಿದ್ದೆ. ನಾನು ಖುಬಾದಲ್ಲಿ ತಂಗಿದೆ. ಅಲ್ಲೇ ಅಬ್ದುಲ್ಲಾಹ್ ಬಿನ್ ಝುಬೈರರ ಜನನವಾಯಿತು. ನಾನು ಅವನನ್ನು ಎತ್ತಿಕೊಂಡು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಹಾಜರಾದೆ. ಅವರು ಅವನನ್ನು ತಮ್ಮ ಮಡಿಲಲ್ಲಿ ಇರಿಸಿ ಅವನ ಬಾಯಿಗೆ ತಮ್ಮ ಬಾಯಿಯ ಜೊಲ್ಲನ್ನು ಹಾಕಿದರು. ಅವನ ಹೊಟ್ಟೆಯೊಳಗೆ ಹೋದ ಮೊದಲ ವಸ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹೀತ ಲಾಲಾರಸವಾಗಿತ್ತು. ಅನಂತರ ಅವರು ಖರ್ಜೂರವನ್ನು ಜಗಿದು ಅವನ ಬಾಯಿಗೆ ಹಾಕಿದರು. ಅವನಿಗಾಗಿ ಅನುಗ್ರಹದ ಪ್ರಾರ್ಥನೆ ಮಾಡಿದರು. ಅವನು ಮುಸ್ಲಿಮ್ ಆಗಿ ಹುಟ್ಟಿದ ಮೊದಲ ಮಗುವಾಗಿದ್ದನು. (ಸಹೀಹ್ ಬುಖಾರಿ, ಕಿತಾಬುಲ್ ಮನಾಖಿಬ್ ಅಲ್‌ಅನ್ಸಾರ್, ಹದೀಸ್–3909)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಸ್ಮಾರ ಮಗನಿಗೆ ಅಬ್ದುಲ್ಲಾಹ್ ಎಂದು ನಾಮಕರಣ ಮಾಡಿದರು ಎಂದು ಸಹೀಹ್ ಮುಸ್ಲಿಮಿನ ವರದಿಯಿಂದ ತಿಳಿದುಬರುತ್ತದೆ. ಅವನಿಗೆ ಏಳೆಂಟು ವರ್ಷವಾದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೈಯಲ್ಲಿ ಬೈಅತ್ ಮಾಡಲು ಬಂದನು. ಹೋಗಿ ಬೈಅತ್ ಮಾಡಿ ಬಾ ಎಂದು ಅವನ ಪಿತರಾದ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಅವನನ್ನು ಆದೇಶಿಸಿದ್ದರು. ಅವನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬರುತ್ತಿರುವುದನ್ನು ಕಂಡಾಗ ಅವರು ಮುಗುಳ್ನಕ್ಕರು ಮತ್ತು ಅವನ ಬೈಅತ್ ಸ್ವೀಕರಿಸಿದರು. (ಸಹೀಹ್ ಮುಸ್ಲಿಮ್, ಕಿತಾಬುಲ್ ಆದಾಬ್, ಹದೀಸ್–2146)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಲ್ಲಿ ಮುಹಾಜಿರುಗಳ ನಡುವೆ ಸಹೋದರ ಸಂಬಂಧ ಸ್ಥಾಪಿಸಿದಾಗ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಮದೀನ ಹಿಜ್‌ರತ್ ನಂತರ ಮುಹಾಜಿರುಗಳ ಸಹೋದರ ಸಂಬಂಧವನ್ನು ಅನ್ಸಾರ್‌ರೊಂದಿಗೆ ಸ್ಥಾಪಿಸಿದಾಗ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರ ದೀನಿ ಸಹೋದರ ಹಝ್ರತ್ ಸಲ್‌ಮಾ ಬಿನ್ ಸಲಾಮ ಆದರು.
(ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–2, ಪುಟ–307, ದರುಲ್‌ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ತಮ್ಮ ಗಂಡುಮಕ್ಕಳಿಗೆ ಶಹೀದ್ ಆದವರ ಹೆಸರನ್ನು ಇಟ್ಟಿದ್ದರು. ಅಲ್ಲಾಹನು ಆ ಗಂಡುಮಕ್ಕಳಿಗೆ ಶಹೀದ್ ಪದವಿ ನೀಡಬಹುದು ಎಂಬ ಪ್ರತೀಕ್ಷೆಯಿಂದ ಅವರು ಹಾಗೆ ಮಾಡಿದರು. ತಮ್ಮ ಒಬ್ಬ ಮಗನಿಗೆ ಅಬ್ದುಲ್ಲಾಹ್ ಎಂಬ ಹೆಸರು ಅಬ್ದುಲ್ಲಾಹ್ ಬಿನ್ ಜಹಶ್ ರಝಿಯಲ್ಲಾಹು ಅನ್‌ಹುರ ನೆನಪಲ್ಲಿ, ಮುಂಝಿರ್ ಎಂಬ ಹೆಸರು ಮುಂಝಿರ್ ಬಿನ್ ಅಮ್‌ರ್ ರಝಿಯಲ್ಲಾಹುರ ನೆನಪಿಗಾಗಿ, ಅರ್‌ವ ಎಂಬ ಹೆಸರು ಅರ್‌ವ ಬಿನ್ ಮಸ್‌ಊದ್ ರಝಿಯಲ್ಲಾಹು ಅನ್‌ಹುರ ಹೆಸರಲ್ಲಿ, ಹಂಝ ಎಂಬ ಹೆಸರು ಹಂಝ ಬಿನ್ ಅಬ್ದುಲ್ ಮುತ್ತಲಿಬ್ ರಝಿಯಲ್ಲಾಹು ಅನ್‌ಹು ಎಂಬ ಸಹಾಬಿಯ ಹೆಸರಲ್ಲಿ, ಜಾಫರ್ ಎಂಬ ಹೆಸರು ಜಾಫರ್ ಬಿನ್ ಅಬೂತಾಲಿಬ್ ರಝಿಯಲ್ಲಾಹು ಅನ್‌ಹುರ ಹೆಸರಲ್ಲಿ, ಮುಸ್‌ಅಬ್ ಎಂಬ ಹೆಸರು ಮುಸ್‌ಅಬ್ ಬಿನ್ ಉಮೈರ್ ರಝಿಯಲ್ಲಾಹು ಅನ್‌ಹುರ ಹೆಸರಲ್ಲಿ, ಉಬೈದರ ಹೆಸರು ಉಬೈದ ಬಿನ್ ಹಾರಿಸ್ ರಝಿಯಲ್ಲಾಹು ಅನ್‌ಹುರ ಹೆಸರಲ್ಲಿ, ಖಾಲಿದ್‌ರ ಹೆಸರು ಖಾಲಿದ್ ಬಿನ್ ಸಈದ್ ರಝಿಯಲ್ಲಾಹು ಅನ್‌ಹುರ ಹೆಸರಲ್ಲಿ ಮತ್ತು ಅಮ್‌ರ್ ಎಂಬ ಹೆಸರು ಅಮ್‌ರ್ ಬಿನ್ ಸಈದ್ ಎಂಬವರ ಹೆಸರಲ್ಲಿ ಇಟ್ಟಿದ್ದರು. ಹಝ್ರತ್ ಅಮ್‌ರ್ ಬಿನ್ ಸಈದ್ ಯರ್‌ಮೂಕ್ ಯುದ್ಧದಲ್ಲಿ ಶಹೀದ್ ಆಗಿದ್ದರು.
(ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–74, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಇದು ಎಷ್ಟರ ವರೆಗೆ ಸರಿಯೆಂದು ಗೊತ್ತಾಗುತ್ತಿಲ್ಲ. ಹಝ್ರತ್ ಅಬ್ದುಲ್ಲಾಹ್‌ರ ಇಸ್ಲಾಮಿನಲ್ಲಿ ಜನಿಸಿದ ಮೊದಲ ವ್ಯಕ್ತಿಯಾಗಿದ್ದರೆ ಅವರು ಯಾವ ವರ್ಷ ಹುಟ್ಟಿದ್ದರು ಎಂದು ಅಲ್ಲಾಹನೇ ಬಲ್ಲನು. ಆದರೆ ಆ ಸಮಯದಲ್ಲಿ ಯಾರದಾದರೂ ಶಹಾದತ್ ಆಗಿತ್ತೋ ಇಲ್ಲವೋ ಎಂದು ಗೊತ್ತಿಲ್ಲ. ಹೇಗಿದ್ದರೂ ಆ ಶ್ರೇಷ್ಠ ವ್ಯಕ್ತಿಗಳ ಹೆಸರಲ್ಲಿ ತಮ್ಮ ಮಕ್ಕಳ ಹೆಸರನ್ನು ಇಟ್ಟಿದ್ದರು.

ಉರ್‌ವ ಬಿನ್ ಝುಬೈರ್ ವರದಿ ಮಾಡುತ್ತಾರೆ: ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಎಷ್ಟು ಉದ್ದ ಮೈಕಟ್ಟಿನ ವ್ಯಕ್ತಿಯಾಗಿತ್ತೆಂದರೆ, ಅವರು ಸವಾರಾಗುವಾಗ ಅವರ ಕಾಲುಗಳು ನೆಲಕ್ಕೆ ತಲುಪಿತ್ತಿದ್ದುವು.
(ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–2, ಪುಟ–458, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1995)

ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೈರ್ ಹೇಳುತ್ತಾರೆ: ನಾನು ನನ್ನ ತಂದೆಯರೊಡನೆ ಎಂದರೆ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರೊಡನೆ ಕೇಳಿದೆ, ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ರಝಿಯಲ್ಲಾಹು ಅನ್‌ಹು ಮತ್ತು ಇತರ ಸಹಾಬಿಗಳು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂಬಂಧಿಸಿದ ವರದಿಗಳನ್ನು ಹೇಳುವಂತೆ ನೀವು ಹೇಳುವುದನ್ನು ನಾನು ಕೇಳಿಲ್ಲ ಇದಕ್ಕೆ ಕಾರಣವೇನು? ಅವರು ಹೇಳಿದರು: ನಾನು ಇಸ್ಲಾಮ್ ಸ್ವೀಕರಿಸಿದ ನಂತರ ನಾನು ಹಝ್ರತ್

ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಬೇರ್ಪಟ್ಟಿಲ್ಲ. ಆದರೆ ನಾನು ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾಗಿ ಕೇಳಿದ್ದೇನೆ: "ಯಾವ ವ್ಯಕ್ತಿ ಅರಿತುಕೊಂಡು ನನಗೆ ಸಂಬಂಧಿಸಿ ಸುಳ್ಳು ಮಾತುಗಳನ್ನು ಹೇಳುತ್ತಾನೋ ಅವನು ತನ್ನ ಸ್ಥಾನವನ್ನು ನರಕದಲ್ಲಿ ಖಚಿತಪಡಿಸಿದ್ದಾನೆ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–1, ಪುಟ–451, ಹದೀಸ್–1413, ಆಲಿಮುಲ್ ಕುತುಬ್ ಬೈರೂತ್ 1998)

ಇದರ ಅರ್ಥ ಇತರರೆಲ್ಲರೂ ಸುಳ್ಳು ಮಾತುಗಳನ್ನು ಹೇಳುತ್ತಾರೆ ಎಂದಲ್ಲ. ಬದಲಿಗೆ ತನ್ನಿಂದ ಅರಿಯದೆಯೂ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂಬಂಧಿಸಿ ತಪ್ಪಾದ ಸಂಗತಿಗಳು ಹೇಳಿ ಶಿಕ್ಷಾರ್ಹರಾಗದಿರಲಿ ಎಂಬ ಮುಂಜಾಗ್ರತೆಯನ್ನು ಅವರು ವಹಿಸುತ್ತಿದ್ದರು. ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂಬಂಧಿಸಿ ಇಷ್ಟು ಜಾಗ್ರತೆಯಿತ್ತು ಅವರಲ್ಲಿ.

ಹಝ಼್ರತ್ ಸಈದ್ ಬಿನ್ ಮುಸಯ್ಯಬ್ ವರದಿ ಮಾಡುತ್ತಾರೆ: ಅಲ್ಲಾಹನ ಮಾರ್ಗದಲ್ಲಿ ತಮ್ಮ ಖಡ್ಗವನ್ನು ಕವಚದಿಂದ ಹೊರತೆಗೆದ ಮೊದಲ ವ್ಯಕ್ತಿ ಹಝ಼್ರತ್ ಝ಼ುಬೈರ್ ಬಿನ್ ಅವಾಮ್ ರಝ಼ಿಯಲ್ಲಾಹು ಅನ್‌ಹು ಆಗಿದ್ದರು. ಒಂದು ಸಲ ಹಝ಼್ರತ್ ಝ಼ುಬೈರ್ ರಝಿಯಲ್ಲಾಹು ಅನ್‌ಹು ಮಕ್ಕಾದ ಒಂದು ಸ್ಥಳವಾದ ಮತಾಬಿಖ಼್‌ನ ಕಣಿವೆಯಲ್ಲಿ ಆರಾಮ್ ಮಾಡುತ್ತಿದ್ದರು. ಆಗ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಶಹೀದ್ ಮಾಡಲಾಗಿದೆ ಎಂದು ಅಚಾನಕ್ಕಾಗಿ ಎಲ್ಲಿಂದಲೋ ಕೇಳಿಬಂತು. ಹಝ಼್ರತ್ ಝ಼ುಬೈರ್‌ರಝ಼ಿಯಲ್ಲಾಹು ಅನ್‌ಹುಬೇಗನೇ ತನ್ನ ಖಡ್ಗವನ್ನು ಕವಚದಿಂದ ಹೊರತೆಗೆದು ಮನೆಯಿಂದ ಹೊರಟರು. ಮಾರ್ಗ ಮಧ್ಯೆ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ನೋಡಿ ಕೇಳಿದರು: ಝ಼ುಬೈರ್, ನಿಲ್ಲು ನಿಲ್ಲು, ಏನಾಯಿತು? ಹಝ಼್ರತ್ ಝ಼ುಬೈರ್ ರಝ಼ಿಯಲ್ಲಾಹು ಅನ್‌ಹು ಹೇಳಿದರು: ನಿಮ್ಮನ್ನು ಶಹೀದ್ ಮಾಡಲಾಗಿದೆ ಎಂದು ನನಗೆ ಎಲ್ಲಿಂದಲೋ ಶಬ್ದಬಂದಿತ್ತು. ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನಾನು ಶಹೀದ್ ಆಗಿದ್ದರೆ ನಿನಗೆ ಏನು ಮಾಡಲು ಸಾಧ್ಯ? ಆಗ ಅವರು ಹೇಳಿದರು: ಅಲ್ಲಾಹನಾಣೆ, ನಾನು ಮಕ್ಕಾ ನಿವಾಸಿಗಳಲ್ಲೆರನ್ನು ಕೊಲ್ಲಲು ಉದ್ದೇಶಿಸಿದ್ದೆ. ಆಗ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗಾಗಿ ವಿಶೇಷವಾದೊಂದು ಪ್ರಾರ್ಥನೆ ಮಾಡಿದರು. ಒಂದು ವರದಿ ಪ್ರಕಾರ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಖಡ್ಗಕ್ಕಾಗಿಯೂ ದುಆ ಮಾಡಿದ್ದರು ಎಂದು ಬಂದಿದೆ.

ಹಝ಼್ರತ್ ಸಈದ್ ಬಿನ್ ಮುಸಯ್ಯಬ್ ಹೇಳುತ್ತಾರೆ: ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ಼್ರತ್ ಝ಼ುಬೈರ್ ರಝ಼ಿಯಲ್ಲಾಹು ಅನ್‌ಹುರ ಪರವಾಗಿ ಮಾಡಿದ ದುಆ ವ್ಯರ್ಥವಾಗಲಾರದು ಎಂದು ನಾನು ಪ್ರತೀಕ್ಷಿಸುತ್ತೇನೆ. (ಕಿತಾಬ್ ಫಝ಼ಾಎಲುಸ್ಸಹಾಬ ಲಿಇಮಾಮ್ ಅಹ್ಮದ್ ಬಿನ್ ಹಂಬಲ್, ಸಂಪುಟ–2, ಪುಟ–733, ಫಝ಼ಾಎಲ್ ಅಝ಼್ಝ಼ುಬೈರ್ ಬಿನ್ ಅಲ್‌ಅವಾಮ್, ದಾರುಲ್ ಇಲ್‌ಮುತ್ತಬಾಅ ವನ್ನಶರುಸ್ಸೌದಿಯ 1983) (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್, ಸಂಪುಟ–2, ಪುಟ–512, ದಾರುಲ್ ಜೀಲ್ ಬೈರೂತ್ 1992) (ಮೊಜಮುಲ್ ಬಲದಾನ್, ಸಂಪುಟ–5, ಪುಟ–171, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್)

ಹಝ಼್ರತ್ ಝ಼ುಬೈರ್ ರಝ಼ಿಯಲ್ಲಾಹು ಅನ್‌ಹುಬದರ್, ಉಹದ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗಿಯಾಗಿದ್ದರು. ಉಹದ್ ಯುದ್ಧದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸ್ಥೈರ್ಯದಿಂದ ಇದ್ದರು. ಮರಣಕ್ಕೂ ತಯಾರಾಗಿದ್ದೇವೆ ಎಂದು ಹೇಳಿ ಅವರು ಬೈಅತ್ ಮಾಡಿದ್ದರು. ಮಕ್ಕಾ ವಿಜಯದ ವೇಳೆ ಮುಹಾಜಿರ್‌ಗಳ ಮೂರು ಧ್ವಜಗಳಲ್ಲಿ ಒಂದು ಧ್ವಜ ಹಝ಼್ರತ್ ಝ಼ುಬೈರರ(ರ) ಬಳಿಯಲ್ಲಿ ಇತ್ತು. (ಅತ್ತಬಖಾತುಲ್ ಕುಬ್ರ ಸಂಪಟು–3, ಪುಟ–77, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಬದ್ರ್ ದಿವಸ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಎರಡು ಕುದುರೆಗಳಿದ್ದುವು. ಅವುಗಳಲ್ಲಿ ಒಂದರಲ್ಲಿ ಹಝ಼್ರತ್ ಝ಼ುಬೈರ್ ರಝ಼ಿಯಲ್ಲಾಹು ಅನ್‌ಹು ಸವಾರರಾಗಿದ್ದರು. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–76, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ಼್ರತ್ ಉರ್‌ವ ವರದಿ ಮಾಡುತ್ತಾರೆ: ಹಝ಼್ರತ್ ಝ಼ುಬೈರ್ ರಝ಼ಿಯಲ್ಲಾಹು ಅನ್‌ಹುರ ದೇಹದಲ್ಲಿ ಖಡ್ಗದ ಮೂರು ಆಳವಾದ ತೀವ್ರ ಗಾಯಗಳಾಗಿದ್ದುವು. ಅವು ನನ್ನ ಬೆರಳುಗಳು ಒಳಗೆ ಹೋಗುವಷ್ಟು ಆಳವಾದ ಗಾಯವಾಗಿದ್ದುವು. ಎರಡು ಗಾಯಗಳು ಬದ್ರ್ ಯುದ್ಧದ ವೇಳೆ ಆಗಿದ್ದುವು ಮತ್ತು ಒಂದು ಗಾಯ ಯರ್‌ಮೂಕ್ ಯುದ್ಧದ ವೇಳೆ ಉಂಟಾಗಿತ್ತು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–2, ಪುಟ–459, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1995)

ಹಳದಿ ಬಣ್ಣದ ಮುಂಡಾಸಿನಿಂದ ಹಝ಼್ರತ್ ಝ಼ುಬೈರ್ ರಝ಼ಿಯಲ್ಲಾಹು ಅನ್‌ಹುರನ್ನು ಗುರುತಿಸ ಬಹುದಾಗಿತ್ತು ಎಂದು ಮೂಸಾ ಬಿನ್ ಮುಹಮ್ಮದ್ ತಮ್ಮ ತಂದೆಯಿಂದ ವರದಿ ಮಾಡುತ್ತಾರೆ. ಬದ್ರ್ ಯುದ್ಧದಲ್ಲಿ ಹಝ಼್ರತ್ ಝ಼ುಬೈರ್ ರಝ಼ಿಯಲ್ಲಾಹು ಅನ್‌ಹು ಹಳದಿ ಮುಂಡಾಸನ್ನು ತಲೆಗೆ ಕಟ್ಟಿದ್ದರು. ದೇವದೂತರು ಝ಼ುಬೈರಿನ ಹಾಗೆಯೇ ಇಳಿದು ಬಂದಿರುವರು ಎಂದು ಹಝ಼್ರತ್ ಝ಼ುಬೈರ್(ರ) ಮುಂಡಾಸು ತಲೆಗೆ ಕಟ್ಟಿದ್ದನ್ನು ನೋಡಿ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದರು. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–76, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಅಂದರೆ, ಅಲ್ಲಾಹನು ಸಹಾಯಕ್ಕಾಗಿ ಕಳುಹಿಸಿದ ಮಲಕುಗಳು (ದೇವದೂತರು) ಸಹ ಇದೇ ಬಣ್ಣದ ಮುಂಡಾಸು ಧರಿಸಿ ಹೋರಾಡುತ್ತಿದ್ದಾರೆ. ಹಿಶಾಮ್ ಬಿನ್ ಅರ್‌ವ ತಮ್ಮ ಪಿತರಿಂದ ವರದಿ ಮಾಡುತ್ತಾರೆ – ಹಝ಼್ರತ್ ಝ಼ುಬೈರ್ ರಝ಼ಿಯಲ್ಲಾಹು ಅನ್‌ಹು ಹೇಳುತ್ತಿದ್ದರು: ಬದ್ರ್ ಯುದ್ಧದ ದಿನ ಉಬೈದ ಬಿನ್ ಸಈದ್‌ನೊಡನೆ ನನ್ನ ಮುಖಾಮುಖಿಯಾಯಿತು. ಅವನು ತನ್ನ ಶರೀರವನ್ನು ಅಸ್ತ್ರಗಳಿಂದ ಪೂರ್ತಿಯಾಗಿ ಮುಚ್ಚಿದ್ದನು. ಅವನ ಕಣ್ಣುಗಳನ್ನು ಮಾತ್ರವೇ ಕಾಣಬಹುದಾಗಿತ್ತು. ಅವನ ಉಪನಾಮ ಅಬೂಝ಼ಾತುಲ್ ಖುರ್‌ಶ್ ಎಂದಾಗಿತ್ತು. ತಾನು ಅಬೂಝ಼ಾತುಲ್ ಖುರ್‌ಶ್ ಆಗಿರುವನು ಎಂದು ಅವನು ಹೇಳತೊಡಗಿದ. ಅದನ್ನು ಕೇಳಿದಾಕ್ಷಣ ನಾನು ಈಟಿಯಿಂದ ಅವನ ಮೇಲೆ ಹಲ್ಲೆ ಮಾಡಿದೆ. ಅವನ ಕಣ್ಣಿಗೆ ಗಾಯವಾಗಿ ಅವನು ಅಲ್ಲೇ ಸತ್ತುಹೋದನು. ನಾನು ನನ್ನ ಕಾಲನ್ನು ಅವನ ಮೇಲೆ ಇಟ್ಟು ಬಹಳ ಬಲದಿಂದ ಮತ್ತು ಬಹಳ ಕಷ್ಟಪಟ್ಟು ಆ ಈಟಿಯನ್ನು ಎಳೆದಾಗ ಅದರ ಇಬ್ಬಾಗವೂ ಬಗ್ಗಿ ಹೋಯಿತು. ಅಷ್ಟು ಶಕ್ತವಾಗಿ ಈಟಿಯಿಂದ ತಿವಿಯಲಾಗಿತ್ತು. ಅರ್‌ವ ಹೇಳುತ್ತಾರೆ: ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಈಟಿಯನ್ನು ಹಝ಼್ರತ್ ಝ಼ುಬೈರರಿಂದ(ರ) ಪಡಕೊಂಡರು. ಅವರು ಅದನ್ನು ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನೀಡಿದರು. ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಫಾತ್ ಆದಾಗ ಹಝ಼್ರತ್ ಝ಼ುಬೈರ್(ರ) ಅದನ್ನು ಮರಳಿ ಪಡೆದರು. ಅದರ ನಂತರ ಹಝ಼್ರತ್ ಅಬೂಬಕ್ಕರ್ ರಝ಼ಿಯಲ್ಲಾಹು ಅನ್‌ಹು ಆ ಈಟಿಯನ್ನು ಪಡಕೊಂಡರು. ಹಝ಼್ರತ್ ಝ಼ುಬೈರ್(ರ) ಅದನ್ನು ಅವರಿಗೆ ಕೊಟ್ಟರು. ಹಝ಼್ರತ್ ಅಬೂಬಕ್ಕರ್ ರಝ಼ಿಯಲ್ಲಾಹು ಅನ್‌ಹು ನಿಧನರಾದಾಗ, ಹಝ಼್ರತ್ ಉಮರ್ ರಝ಼ಿಯಲ್ಲಾಹು ಅನ್‌ಹು ಆ ಈಟಿಯನ್ನು ಅವರಿಂದ ಕೋರಿದರು. ಅವರು ಹಝ಼್ರತ್ ಉಮರ್ ರಝ಼ಿಯಲ್ಲಾಹು ಅನ್‌ಹುರಿಗೆ ಅದನ್ನು ಕೊಟ್ಟರು. ಹಝ಼್ರತ್ ಉಮರ್ ರಝ಼ಿಯಲ್ಲಾಹು ಅನ್‌ಹು ನಿಧನರಾದಾಗ ಹಝ಼್ರತ್ ಝ಼ುಬೈರ್(ರ) ಅದನ್ನು ವಾಪಾಸ್ಸು ತೆಗೆದರು. ಅನಂತರ ಹಝ಼್ರತ್ ಉಸ್ಮಾನ್ ರಝ಼ಿಯಲ್ಲಾಹು ಅನ್‌ಹು ಆ ಈಟಿಯನ್ನು ಕೋರಿದರು. ಹಝ಼್ರತ್ ಝ಼ುಬೈರ್(ರ) ಅದನ್ನು ಹಝ಼್ರತ್ ಉಸ್ಮಾನ್ ರಝ಼ಿಯಲ್ಲಾಹು ಅನ್‌ಹುರಿಗೆ ಕೊಟ್ಟರು. ಹಝ಼್ರತ್ ಉಸ್ಮಾನ್ ರಝ಼ಿಯಲ್ಲಾಹು ಅನ್‌ಹು ಶಹೀದ್ ಆದಾಗ ಅದು ಹಝ಼್ರತ್ ಅಲಿ ರಝ಼ಿಯಲ್ಲಾಹು ಅನ್‌ಹುರ ಕುಟುಂಬಕ್ಕೆ ಲಭಿಸಿತು. ಕೊನೆಗೆ ಅದನ್ನು ಹಝ಼್ರತ್ ಅಬ್ದುಲ್ಲಾಹ್ ಬಿನ್ ಝ಼ುಬೈರ್‌ಅವರಿಂದ ವಾಪಾಸ್ಸು ಪಡೆದರು. ಹಝ಼್ರತ್ ಅಬ್ದುಲ್ಲಾಹ್ ಬಿನ್ ಝ಼ುಬೈರ್ ಶಹೀದ್ ಆಗುವ ವರೆಗೆ ಅದು ಅವರ ಬಳಿಯಲ್ಲೇ ಇತ್ತು. (ಸಹೀಹ್ ಬುಖಾರಿ, ಕಿತಬುಲ್ ಮಗಾಝಿ, ಬಾಬ್–12, ಹದೀಸ್–3998)

ಹಝ಼್ರತ್ ಝ಼ುಬೈರ್ ಬಿನ್ ಅವಾವ್ ರಝ಼ಿಯಲ್ಲಾಹು ಅನ್‌ಹುಹೇಳುತ್ತಾರೆ: ಉಹದ್ ಯುದ್ಧದ ದಿನ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನ್ನೊಡನೆ ಹೀಗೆ ಹೇಳಿದರು: ನನ್ನ ತಂದೆ ತಾಯಿ ನಿನಗಾಗಿ ಅರ್ಪಣವಾಗಲಿ. (ಮುಸ್‌ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–1, ಪುಟ–450, ಹದೀಸ್–1408, ಆಲಿಮುಲ್ ಕುತುಬ್ ಬೈರೂತ್ 1998)

ಹಝ಼್ರತ್ ಝ಼ುಬೈರ್ ರಝ಼ಿಯಲ್ಲಾಹು ಅನ್‌ಹು ಹೇಳುತ್ತಾರೆ: ಉಹದ್ ಯುದ್ಧದ ವೇಳೆ ಓರ್ವ ಮಹಿಳೆ ಮುಂದಿನಿಂದ ಬಹಳ ವೇಗವಾಗಿ ಬರುತ್ತಿರುವುದಾಗಿ ನಾವು ಕಂಡೆವು. ಇನ್ನು ಸ್ವಲ್ಪ ಮುಂದೆ ಬಂದರೆ ಹುತಾತ್ಮರ ಮೃತಶರೀರವನ್ನು ಕಾಣಬಹುದಾಗಿತ್ತು. ಓರ್ವ ಸ್ತ್ರೀ ಅವುಗಳನ್ನು ನೋಡುವುದು ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಇಷ್ಟವಿರಲಿಲ್ಲ. ಅವು ಬಹಳ ಕೆಟ್ಟ ಸ್ಥಿತಿಯಲ್ಲಿದ್ದುವು. ಅಂಗಚ್ಛೇದ ಮಾಡಿ ವಿರೂಪಗೊಳಿಸಲಾಗಿತ್ತು. ಆದ್ದರಿಂದ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಮಹಿಳೆಯನ್ನು ಮೃತಶರೀರದ ಸಮೀಪ ಬರುವುದರಿಂದ ತಡೆಯಲು ಹೇಳಿದರು. ಹಝ಼್ರತ್ ಝ಼ುಬೈರ್ ರಝ಼ಿಯಲ್ಲಾಹು ಅನ್‌ಹು ಹೇಳುತ್ತಾರೆ: ಬರುತ್ತಿರುವ ಮಹಿಳೆ ನನ್ನ ತಾಯಿಯಾದ ಹಝ಼್ರತ್ ಸಫಿಯಾ ಎಂದು ನಾನು ಅಂದಾಜು ಮಾಡಿದೆ. ತಾಯಿಯು ಹುತಾತ್ಮರ ಮೃತದೇಹದ ಸಮೀಪ ತಲುಪುವುದಕ್ಕೆ

ಮುಂಚಿತವಾಗಿ ನಾನು ಓಡುತ್ತಾ ತಾಯಿಯ ಸಮೀಪ ಮುಟ್ಟಿದೆನು. ನನ್ನನ್ನು ನೋಡಿ ನನ್ನ ತಾಯಿ ನನ್ನ ಎದೆಯ ಮೇಲೆ ಕೈಯಿಟ್ಟು ನನ್ನನ್ನು ಹಿಂದಕ್ಕೆ ತಳ್ಳಿದರು. ಹಝ್ರತ್ ಝುಬೈರಿನ ತಾಯಿ ಬಲಶಾಲಿಯಾದ ಸ್ತ್ರೀಯಾಗಿದ್ದರು. ದೂರ ಹೋಗು ನನಗೆ ನಿನ್ನೊಡನೆ ಏನೂ ಮಾತನಾಡಲಿಕ್ಕಿಲ್ಲ ಮತ್ತು ನಿನ್ನ ಮಾತನ್ನು ಕೇಳುವುದು ಇಲ್ಲ ಎಂದು ನನ್ನ ತಾಯಿ ಹೇಳಿದಳು. ನಾನು ಹೇಳಿದೆ, ನೀವು ಮೃತದೇಹವನ್ನು ನೋಡಬಾರದು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನೊಡನೆ ಅಲ್ಲಾಹನ ಆಣೆ ಹಾಕಿ ಆಜ್ಞಾಪಿಸಿದ್ದಾರೆ. ಇದನ್ನು ಕೇಳಿದೊಡನೆ ಹಝ್ರತ್ ಸಫಿಯಾ ರಝಿಯಲ್ಲಾಹು ಅನ್‌ಹಾನಿಂತುಬಿಟ್ಟರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆದೇಶಿಸಿದ್ದಾಗಿ ಹೇಳಿದ ಕೂಡಲೆ ನಿಂತುಬಿಟ್ಟರು. ತನ್ನ ಕೈಯಲ್ಲಿ ಇದ್ದ ಎರಡು ಬಟ್ಟೆಗಳನ್ನು ನನಗೆ ನೀಡುತ್ತಾ ಹೇಳಿದಳು: ಇವು ನಾನು ನನ್ನ ಸಹೋದರ ಹಂಝಾರಿಗಾಗಿ ತಂದಿರುವೆನು. ಏಕೆಂದರೆ ಅವರು ಶಹೀದಾದ ಸುದ್ದಿ ನನಗೆ ಲಭಿಸಿತ್ತು. ನೀನು ಅವರಿಗೆ ಈ ಎರಡು ಬಟ್ಟೆಗಳಿಂದ ಕಫನ್ ಮಾಡಿಸು. ಮತ್ತೊಂದು ವರದಿಯ ಪ್ರಕಾರ ಅವರು ಹೀಗೆ ಹೇಳಿದ್ದಾಗಿ ಬಂದಿದೆ: ಹಝ್ರತ್ ಸಫಿಯಾ ರಝಿಯಲ್ಲಾಹು ಅನ್‌ಹಾ ಹೇಳಿದರು: ನನ್ನ ಸಹೋದರನ ಮೃತದೇಹವನ್ನು ವಿಭಜಿಸಿ ವಿರೂಪಗೊಳಿಸಲಾಗಿದೆ ಎಂದು ನನಗೆ ಗೊತ್ತಿದೆ, ಇದು ಅಲ್ಲಾಹನ ಮಾರ್ಗದಲ್ಲೇ ಆಗಿದೆ. ಅಲ್ಲಾಹನ ಮಾರ್ಗದಲ್ಲಿ ಅವರಿಗೆ ಉಂಟಾದ ಸ್ಥಿತಿಯ ಬಗ್ಗೆ ನಾನೇಕೆ ನಿರಾಶೆಹೊಂದಬೇಕು? ನಾನು ಇನ್‌ಶಾ ಅಲ್ಲಾಹ್ ಸಹನೆ ಕೈಗೊಳ್ಳುವೆ ಮತ್ತು ಅಲ್ಲಾಹನಂದ ಅದರ ಪ್ರತಿಫಲವನ್ನು ಬೇಡುವೆ. ತಾಯಿಯ ಈ ಉತ್ತರವನ್ನು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಕೇಳಿದ ನಂತರ ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಹಾಜರಾಗಿ ತಾಯಿಯೊಡನೆ ನಡೆದ ಮಾತುಕತೆಯನ್ನು ವಿವರಿಸಿದರು. ಸಹೋದರನ ಮೃತದೇಹದ ಬಳಿಗೆ ಹೋಗಲು ಸಫಿಯಾರನ್ನು ಬಿಡು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು. ಹಝ್ರತ್ ಸಫಿಯಾ ರಝಿಯಲ್ಲಾಹು ಅನ್‌ಹಾ ಮುಂದಕ್ಕೆ ಹೋಗಿ ತನ್ನ ಸಹೋದರನ ಮೃತದೇಹವನ್ನು ನೋಡಿ ಅವರಿಗಾಗಿ ದುಆ ಮಾಡಿದರು ಮತ್ತು **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳಿದರು. ಅವರಿಗಾಗಿ ಮಗ್‌ಫಿರತಿನ ದುಆ ಮಾಡಿದರು. ಅದರ ನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ದಫನ್ ಮಾಡಲು ಆಜ್ಞಾಪಿಸಿದರು. ವರದಿಗಾರ ಹೇಳುತ್ತಾರೆ: ನಾವು ಹಝ್ರತ್ ಹಂಝಾ ರಝಿಯಲ್ಲಾಹು ಅನ್‌ಹುರನ್ನು ಎರಡು ಬಟ್ಟೆಗಳಿಂದ ಹೊದಿಸಲು ಹೋಗುವಾಗ ಅವರ ಬಳಿಯಲ್ಲೇ ಒಬ್ಬ ಅನ್ಸಾರಿ ಮುಸ್ಲಿಮ್ ಶಹೀದ್ ಆಗಿ ಬಿದ್ದಿರುವುದು ಕಂಡೆವು. ಹಝ್ರತ್ ಹಂಝಾ ರಝಿಯಲ್ಲಾಹು ಅನ್‌ಹುರೊಂದಿಗೆ ಮಾಡಲಾದ ರೀತಿಯಲ್ಲೇ ಅವರ ದೇಹವನ್ನು ವಿರೂಪಗೊಳಿಸಲಾಗಿತ್ತು. ಹಝ್ರತ್ ಹಂಝಾರನ್ನು ಎರಡು ಬಟ್ಟೆಗಳಿಂದ ಕಫನ್ ಮಾಡಿಸಿ, ಆ ಅನ್ಸಾರಿಗೆ ಒಂದು ಬಟ್ಟೆಯು ಇಲ್ಲದಂತೆ ಆಗುವುದನ್ನು ನಾವು ಇಷ್ಟಪಡಲಿಲ್ಲ. ಆದ್ದರಿಂದ ಒಂದು ಬಟ್ಟೆಯಿಂದ ಹಝ್ರತ್ ಹಂಝಾರಿಗೆ ಕಫನ್ ಮಾಡಿ ಮತ್ತೊಂದು ಬಟ್ಟೆಯಿಂದ ಆ ಅನ್ಸಾರಿಯನ್ನು ಹೊದಿಸಲು ನಾವು ತೀರ್ಮಾನಿಸಿದೆವು. ಇವರು ಎರಡರಲ್ಲಿ ಒಬ್ಬರು ಉದ್ದ ಮೈಕಟ್ಟಿನವರಾಗಿದ್ದರು. ಯಾವ ಬಟ್ಟೆಯುಚೀಟಿ ಎತ್ತುವುದರಿಂದ ಯಾರ ಹೆಸರಲ್ಲಿ ಬಂತೋ ಅವರನ್ನು ಆ ಬಟ್ಟೆಯಲ್ಲಿ ಕಫನ್ ಮಾಡಿಸಿ ದಫನ್ ಮಾಡಿದುವು. ಆಗಲೂ ಅದು ಅವರಿಗೆ ಸಾಕಾಗಲಿರಲಿಲ್ಲ. ಉಳಿದ ದೇಹಭಾಗವನ್ನು ಮರೆಚಲು ಹುಲ್ಲುಹಾಕಬೇಕಾಗಿ ಬಂದಿತ್ತು. (ಮಸ್‌ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–1, ಪುಟ–452, ಮಸ್‌ನದ್ ಝುಬೈರ್ ಬಿನುಲ್ ಅವಾಮ್, ವರದಿ–1418, ಆಲಿಮುಲ್ ಕುತುಬ್ ಬೈರೂತ್ 1998) (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಸಂಪುಟ–2, ಪುಟ–97, ಮುಸ್ತಫಾ ಅಲ್‌ಬಾನಿ ಬಿಮಿಸರ್ 1955) (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–10, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಖಂದಕ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನನ್ನ ಬಳಿಗೆ ಬನೂ ಖುರೈಝಾರ ಬಗ್ಗೆ ಮಾಹಿತಿಯನ್ನು ಕೊಂಡುಬರುವ ಯಾರಾದರೂ ಇದ್ದಾರೆಯೇ? "ನಾನು ಹಾಜರಿದ್ದೇನೆ" ಎಂದು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಉತ್ತರಕೊಟ್ಟರು. "ನನ್ನ ಬಳಿಗೆ ಬನೂ ಖುರೈಝಾರ ಬಗ್ಗೆ ಮಾಹಿತಿಯನ್ನು ಕೊಂಡುಬರುವ ಯಾರಾದರೂ ಇದ್ದಾರೆಯೇ?" ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪುನಃ ಕೇಳಿದರು. ನಾನು ಹಾಜರಿದ್ದೇನೆ ಎಂದು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಪುನಃ ಉತ್ತರಕೊಟ್ಟರು. ನನ್ನ ಬಳಿಗೆ ಬನೂ ಖುರೈಝಾರ ಬಗ್ಗೆ ಮಾಹಿತಿಯನ್ನು ಕೊಂಡುಬರುವ ಯಾರಾದರೂ ಇದ್ದಾರೆಯೇ? ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೂರನೇ ಬಾರಿ ಕೇಳಿದರು. ನಾನು ಹಾಜರಿದ್ದೇನೆ ಎಂದು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಪುನಃ ಉತ್ತರಕೊಟ್ಟರು. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪ್ರತಿ ಪ್ರವಾದಿಗೂಒಬ್ಬ ವಿಶಿಷ್ಟ ಶಿಷ್ಯನೂ ಗೆಳೆಯನೂ ಇರುತ್ತಾನೆ. ನನ್ನ ಹವಾರಿ ಝುಬೈರ್ ಆಗಿರುವನು. "ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹವಾರಿಯ ಮಗನಾಗಿರುವೆನು" ಎಂದು ಒಬ್ಬ ವ್ಯಕ್ತಿ ಹೇಳುತ್ತಿರುವುದನ್ನು ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್ ಕೇಳಿದರು. ಅವರು ಹೇಳಿದರು: ನೀನು ಹಝ್ರತ್ ಝುಬೈರಿನ ಮಗನಾಗಿದ್ದರೆ ನೀನು ಹೇಳಿದ್ದು ಸರಿ, ಅಲ್ಲವೆಂದಾದರೆ ಸರಿಯಲ್ಲ. ಹಝ್ರತ್ ಝುಬೈರ್ ಅಲ್ಲದೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹವಾರಿಯೆಂದು ಕರೆಯಲ್ಪಟ್ಟಿದ್ದ ಬೇರೊಬ್ಬರು ಸಹ ಇದ್ದರು ಎಂದು ಅನ್ವೇಷಣೆ ಮಾಡಿದಾಗ ತಿಳಿದುಬಂತು. ಆಗ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್ ಹೇಳಿದರು: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬೇರೆಯೊಬ್ಬರ ಬಗ್ಗೆ ಹಾಗೆ ಹೇಳಿದ್ದಾಗಿ ನನ್ನ ಅರಿವಿಗೆ ಬಂದಿಲ್ಲ. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–78, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೈರ್ ವರದಿ ಮಾಡುತ್ತಾರೆ: ಅಹ್‌ಝಾಬ್ ಯುದ್ಧದ ವೇಳೆ ನನ್ನನ್ನು ಮತ್ತು ಉಮರ್ ಬಿನ್ ಅಬೀ ಸಲ್ಮಾರನ್ನು ಸ್ತ್ರೀಗಳ ಮೇಲ್ನೋಟ ವಹಿಸಲು ನಿಶ್ಚಯಿಸಲಾಯಿತು. ನನ್ನ ಪಿತರಾದ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಕುದುರೆಯ ಮೇಲೆ ಸವಾರಾಗಿರುವುದನ್ನು ನಾನು ಕಂಡೆನು. ಅವರು ಎರಡು ಮೂರು ಸಲ ಬನೂ ಖುರೈಝಾರ ಕಡೆಗೆ ಹೋಗುತ್ತಿರುವುದಾಗಿ ನಾನು ಕಂಡೆನು. ಅವರು ಮರಳಿ ಬಂದಾಗ ನಾನು ನನ್ನ ತಂದೆಯರೊಡನೆ ಕೇಳಿದೆ: ಹೇ ನನ್ನ ಪಿತ, ನೀವು ಆಚೆ ಈಚೆ ಹೋಗುತ್ತಿರುವುದಾಗಿ ನಾನು ಕಂಡೆನು. "ಮಗನೇ, ನೀನು ನನ್ನನ್ನು ಸತ್ಯವಾಗಿಯೂ ನೋಡಿದ್ದೀಯಾ" ಎಂದು ಅವರು ಕೇಳಿದರು. ಹೌದು ಎಂದು ನಾನು ಉತ್ತರಕೊಟ್ಟೆ. ಆಗ ಅವರು ಹೇಳಿದರು: ಬನೂ ಖುರೈಝಾರ ಬಳಿಗೆ ಹೋಗಿ ಅವರ ಬಗ್ಗೆ ಮಾಹಿತಿ ತರಲು ಯಾರು ಸಿದ್ಧರಾಗಿದ್ದಾರೆ ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದ್ದರು. ಹಾಗೆ ನಾನು ಹೋಗಲು ತಯಾರಾದೆನು. ನಾನು ಮರಳಿ ಬಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ವಿವರವನ್ನು ತಲುಪಿಸಿದಾಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನನ್ನ ತಂದೆತಾಯಿ ನಿನಗಾಗಿ ಅರ್ಪಣವಾಗಲಿ.( ಸ ಹೀ ಹ್ ಬುಖಾರಿ ಕಿತಾಬ್ ಫಝಾಎಲ್ ಅಸ್ಹಾಬುನ್ನಬಿ, ಹದೀಸ್–3720)

ಖೈಬರ್ ಯುದ್ಧದಲ್ಲಿ ಯಹೂದಿಯರ ಪ್ರಸಿದ್ಧ ಸರದಾರ ಮರ್ಹಬನು ಹಝ್ರತ್ ಮುಹಮ್ಮದ್ ಬಿನ್ ಮಸ್ಲಿಮರ ಕೈಯಲ್ಲಿ ಕೊಲ್ಲಲ್ಪಟ್ಟನು. ಆಗ ಅವನ ಸಹೋದರ ಯಾಸಿರ್ ಮೈದಾನಕ್ಕೆ ಇಳಿದನು. ನನ್ನೊಡನೆ ಹೋರಾಡಲು ಯಾರಿದ್ದಾನೆ ಎಂದು ಅವನು ಮನ್‌ಯಬಾರಝ್‌ನಿಗೆ ಜೈಕಾರ ಹಾಕುತ್ತಾ ಉಚ್ಚಸ್ವರದಲ್ಲಿ ಕೇಳಿದನು. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುಅವನನ್ನು ಎದುರಿಸಲು ಮುಂದಾದರು. ಹಝ್ರತ್ ಸಫಿಯಾ ರಝಿಯಲ್ಲಾಹು ಅನ್‌ಹಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹೇಳಿದರು: ಇಂದು ನನ್ನ ಮಗನಿಗೆ ಶಹಾದತ್ ಲಭಿಸುವುದು ಎಂದು ನನಗೆ ತೋರುತ್ತಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಇಲ್ಲ, ಬದಲಿಗೆ ನಿನ್ನ ಮಗ ಅವನನ್ನು ಕೊಲ್ಲುವನು. ಯಾಸಿರ್‌ನೊಂದಿಗೆ ಸೆಣಸಾಡಲು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಹೊರಟನು. ಅವನು ಹಝ್ರತ್ ಝುಬೈರರ(ರ) ಕೈಯಿಂದ ಕೊಲ್ಲಲ್ಪಟ್ಟನು. (ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಸಂಪುಟ–2, ಪುಟ–334, ಮಖ್ತಲ್ ಯಾ ಸರಾಖಿ ಮರ್‌ಹಬ್ ಶರ್‌ಕ ಮಕ್‌ತಬ ವ ಮತ್‌ಬ ಬಿಮಿಸ್ರ್ 1955)

ಸತ್ಯನಿಷೇಧಿಗಳಿಗೆ ಕೊಡಲಿಕ್ಕಾಗಿ ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅರ ಪತ್ರವನ್ನು ತೆಗೆದುಕೊಂಡು ಹೋಗುತ್ತಿದ್ದ ಮಹಿಳೆಯ ಬಗ್ಗೆ ವಿವರ ಪಡೆಯಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಳುಹಿಸಿದ್ದ ಮೂರು ಜನರಲ್ಲಿ ಒಬ್ಬರು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುಆಗಿದ್ದರು. ಇದರ ಬಗ್ಗೆಗಿನ ಪ್ರಸ್ತಾಪ ಹಿಂದೆಯೂ ಆಗಿತ್ತು. ಆದರೂ ಇಂದಿನ ವಿಷಯಕ್ಕೆ ಸಂಬಂಧಿಸಿ ಇಲ್ಲಿಯೂ ಅದರ ಬಗ್ಗೆ ಅಲ್ಪವಾಗಿ ಹೇಳುತ್ತೇನೆ.

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನನ್ನು, ಹಝ್ರತ್ ಝುಬೈರ್ ರಝಿಯಲ್ಲಾಹುರನ್ನು ಮತ್ತು ಹಝ್ರತ್ ಮಿಖ್‌ದಾದ್ ರಝಿಯಲ್ಲಾಹುರನ್ನು ಒಂದು ಸ್ಥಳಕ್ಕೆ ಕಳುಹಿಸುತ್ತಾ ಹೇಳಿದರು: ನೀವು ರೌಝಾ ಖಾಖ್‌ಗೆ ತಲುಪುವಾಗ ಅಲ್ಲಿ ನಿಮಗೆ ಓರ್ವ ಮಹಿಳೆ ಸಿಗುವಳು. ಅವಳ ಬಳಿಯಲ್ಲಿ ಒಂದು ಪತ್ರವಿರುವುದು. ನೀವು ಆ ಪತ್ರವನ್ನು ಪಡೆದು ಮರಳಿ ಬನ್ನಿರಿ. ಅದರಂತೆ ನಾವು ಅಲ್ಲಿಂದ ಹೊರಟೆವು. ಮಕ್ಕ ಮತ್ತು ಮದೀನದ

ಮಾರ್ಗ ಮಧ್ಯೆ ಬರುವ ಪ್ರದೇಶವಾದ ರೌಝಾ ಖಾಖ್‌ಗೆ ನಾವು ತಲುಪಿದಾಗ, ನಿಜವಾಗಿಯೂ ನಾವು ಓರ್ವ ಸ್ತ್ರೀಯನ್ನು ಕಂಡೆವು. ನಿನ್ನ ಬಳಿಯಲ್ಲಿರುವ ಆ ಪತ್ರವನ್ನು ಕೊಡು ಎಂದು ನಾವು ಅವಳೊಡನೆ ಹೇಳಿದೆವು. ನನ್ನ ಬಳಿ ಯಾವುದೇ ಪತ್ರವಿಲ್ಲವೆಂದು ಅವಳು ಹೇಳಿದಳು. ನೀನು ಸ್ವತಃ ಆ ಪತ್ರವನ್ನು ಹೊರಗೆ ತೆಗಿ, ಇಲ್ಲವಾದರೆ ನಾವು ಕಠಿಣ ಕ್ರಮ ಕೈಗೊಳ್ಳಬೇಕಾಗಿ ಬರುವುದು. ನಿನ್ನ ವಸ್ತ್ರವನ್ನು ಬಿಚ್ಚಬೇಕಾಗಿ ಬಂದರೆ ಹಾಗೆಯೂ ಮಾಡುವೆವು. ಅದನ್ನು ಪಡೆಯಲು ಏನು ಬೇಕಾದರೂ ನಾವು ಮಾಡುವೆವು ಎಂದು ನಾವು ಹೇಳಿದೆವು. ವಿವಶಳಾಗಿ ಅವಳು ತನ್ನ ತಲೆಯ ಕೂದಲಿನ ಜುಟ್ಟಿನ ಒಳಗಿನಿಂದ ಆ ಪತ್ರವನ್ನು ಹೊರತೆಗೆದು ನಮಗೆ ಒಪ್ಪಿಸಿದಳು. ನಾವು ಆ ಪತ್ರವನ್ನು ಪಡೆದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ತಲುಪಿದೆವು. ಆ ಪತ್ರವನ್ನು ತೆರೆದು ನೋಡಿದಾಗ, ಅದು ಮಕ್ಕಾದ ಸತ್ಯನಿಷೇಧಿಗಳಿಗೆ ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅ ಬರೆದ ಪತ್ರವಾಗಿತ್ತು ಎಂದು ತಿಳಿದುಬಂತು. ಆ ಪತ್ರದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು ತೀರ್ಮಾನದ ವಿವರವನ್ನು ಬರೆಯಲಾಗಿತ್ತು. ಹಾತಿಬ್, ಇದೇನು, ನೀನು ಏನು ಮಾಡಿದ್ದಿಯಾ? ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಾತಿಬ್‌ನೊಡನೆ ಕೇಳಿದರು. ಹಾತಿಬ್ ಹೇಳಿದರು: ನನ್ನ ಬಗ್ಗೆ ತಪ್ಪಾಗಿ ತಿಳಿದುಕೊಳ್ಳಬೇಡಿರಿ. ನನಗೆ ಖುರೈಶರೊಡನೆ ಈಗ ಯಾವುದೇ ಸಂಬಂಧವಿಲ್ಲ. ಆದರೆ ಅವರಲ್ಲಿ ಸೇರಿದವನಾಗಿರುವ ಕಾರಣ ಅವರಿಗೆ ಒಂದು ಔದಾರ್ಯ ಮಾಡಲು ನಾನು ಯೋಚಿಸಿದೆ. ನಾನು ಈ ಕೆಲಸವನ್ನು ಕಾಫಿರ್ ಆಗಿ ಅಥವಾ ಮುರ್ತದ್ ಆಗಿ ಅಥವಾ ಇಸ್ಲಾಮ್ ಸ್ವೀಕರಿಸಿದ ನಂತರ ಅವಿಶ್ವಾಸವನ್ನು ಇಷ್ಟಪಟ್ಟು ಮಾಡಿರಲಿಲ್ಲ. ಅವರಿಗೆ ಒಂದು ಔದಾರ್ಯವನ್ನು ಮಾಡಲು ಮಾತ್ರ ಇಚ್ಛಿಸಿದೆನು. ನೀನು ಸತ್ಯವನ್ನು ಹೇಳುತ್ತಿದ್ದಿಯಾ ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಬಲ್‌ತಅರೊಡನೆ ಹೇಳಿದರು. ಆ ಸಂದರ್ಭದಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಬಹಳ ಕೋಪವಿಷ್ಠಾರಾಗಿದ್ದರು. ನನಗೆ ಈ ಕಪಟವಿಶ್ವಾಸಿಯ ತಲೆಯನ್ನು ಕಡಿಯಲು ಅನುಮತಿ ನೀಡಿರಿ ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಕೇಳಿದರು: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಬಲ್‌ತಅ ಬದ್ರ್ ಯುದ್ಧದಲ್ಲಿ ಭಾಗವಹಿಸಿದ ವ್ಯಕ್ತಿಯಾಗಿರುವರು. ನಿನಗೇನು ಗೊತ್ತು, ಅಲ್ಲಾಹನು ಬದ್ರ್ ಯುದ್ಧದ ಯೋಧರನ್ನು ಆಕಾಶದಿಂದ ಇಣುಕಿ ನೋಡಿ ಹೇಳಿರುವನು: ನೀವು ಏನೇ ಮಾಡಿದರೂ ನಾನು ನಿಮ್ಮನ್ನು ಕ್ಷಮಿಸುವೆನು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರತ್ ಝುಬೈರ್ ಬಿನ್ ಅವಾಮ್ ರಝಿಯಲ್ಲಾಹು ಅನ್‌ಹು ಸೈನ್ಯದ ಎಡಗಡೆಯಲ್ಲಿದ್ದರು. (ಮಸ್‌ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-5, ಪುಟ-251, ಮಸ್‌ನದ್ ಅಹ್ಮದ್ ಬಿನ್ ಹಂಬಲ್, ಹದೀಸ್-600, ಆಲಿಮುಲ್ ಕುತುಬ್ ಬೈರೂತ್ 1998) (ಫರ್‌ಹಂಗ್ ಸೀರತ್, ಸಯ್ಯಿದ್ ಫಝ್ಲುರ್ರಹ್ಮಾನ್. ಪುಟ-136)

ಹಝ್ರತ್ ಮಿಖ್‌ದಾದ್ ಬಿನ್ ಅಸ್‌ವದ್ ಸೈನ್ಯದ ಬಲಗಡೆಯಲ್ಲಿ ನಿಶ್ಚಯಿಸಲ್ಪಟ್ಟಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕವನ್ನು ಪ್ರವೇಶಿಸಿದ ಮೇಲೆ ಜನರು ಸಮಾಧಾನಗೊಂಡ ನಂತರ, ಇವರಿಬ್ಬರೂ ಎಂದರೆ, ಹಝ್ರತ್ ಮಿಖ್‌ದಾದ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಕುದುರೆಗಳಲ್ಲಿ ಸವಾರರಾಗಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಂತುಕೊಂಡು ತಮ್ಮ ಚಾದರದಿಂದ ಅವರಿಬ್ಬರ ಮುಖಗಳಿಂದ ಧೂಳನ್ನು ಒರೆಸುತ್ತಾ ಹೇಳಿದರು: ನಾನು ಕುದುರೆಗಳಿಗೆ ಎರಡು ಭಾಗಗಳನ್ನು ಮತ್ತು ಸವಾರರಿಗೆ ಒಂದು ಭಾಗವನ್ನು ನಿಶ್ಚಯಿಸಿದ್ದೇನೆ. ಯಾರೂ ಇವರೆಡನ್ನು ಕಡಿಮೆಗೊಳಿಸುತ್ತಾರೋ ಅವರಿಗೆ ಅಲ್ಲಾಹನು ಕಡಿಮೆ ನೀಡುವನು. (ಅತ್ತಬಖಾತು ಕುಬ್ರ, ಸಂಪುಟ-3, ಪುಟ-77, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರಕುರಿತು ಒಂದು ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹುಬುಲ್ ಎಂಬ ಹೆಸರಿನ ವಿಗ್ರಹದ ಮೇಲೆ ತನ್ನ ಬಡಿಗೆಯನ್ನು ಬೀಸಿದಾಗ ಅದು ಅದರ ಜಾಗದಿಂದ ಬಿದ್ದು ಚುರಾಯಿತು. ಆಗ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಅಬೂಸುಫ್‌ಯಾನ್ ಕಡೆಗೆ ಮುಗುಳ್ನಗುತ್ತಾ ನೋಡಿ ಹೀಗೆ ಹೇಳಿದರು: ಉಹದ್ ದಿನದಂದು ಮುಸ್ಲಿಮರು ಗಾಯಾಳಾಗಿ ಒಂದು ಕಡೆ ನಿಂತಿದಾಗ ನೀನು ತನ್ನ ಗರ್ವದಿಂದ ಹುಬುಲಿಗೆ ಜೈಕಾರ ಹಾಕಿ, ಹುಬುಲ್ ನಿಮಗೆ ಉಹದ್ ದಿನದಂದು ಮುಸ್ಲಿಮರ ಮೇಲೆ ವಿಜಯ ನೀಡಿತ್ತು ಎಂದು ಘೋಷಿಸಿದ್ದು ನಿನಗೆ ನೆನಪಿದೆಯಾ? ನಿನ್ನ ಮುಂದೆ ಹುಬುಲಿನ ಚೂರುಗಳು ಬಿದ್ದಿರುವುದು ನೀನಿಂದು ನೋಡುತ್ತಿದ್ದಿಯಾ. ಆಗ ಅಬೂಸುಫ್‌ಯಾನ್ ಹೇಳಿದ: ಝುಬೈರ್, ಈ ಮಾತುಗಳನ್ನು ಬಿಟ್ಟುಬಿಡು, ಇಂದು ನಮಗೆ ಎಲ್ಲವೂ ಉತ್ತಮ ರೀತಿಯಲ್ಲಿ ಕಾಣುತ್ತಿವೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೇವನ ಹೊರತು ಬೇರೆ ದೇವನಿರುತ್ತಿದ್ದರೆ, ನಾವಿಂದು ನೋಡುತ್ತಿರುವುದು ಎಂದೂ ನಡೆಯುತ್ತಿರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೇವನ ಹೊರತು ಬೇರೆ ದೇವನಿಲ್ಲ. (ದೀಬಾಜ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20. ಪುಟ-346-347)

ಹುನೈನ್ ಯುದ್ಧದ ದಿನ ಹವಾಝುನ್ ಗೋತ್ರದ ಅನಿರೀಕ್ಷಿತವಾದ ಬಾಣ ಹೂಡಿಕೆ ನಡೆಸಿತು ಮತ್ತು ಆ ದಿನದಂದು ಇಸ್ಲಾಮಿನ ಸೈನ್ಯದಲ್ಲಿ ಎರಡು ಸಾವಿರ ನವ ಮುಸ್ಲಿಮರು ಇದ್ದೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧ ಮೈದಾನದಲ್ಲಿ ಒಬ್ಬಂಟಿಯಾದರು. ಹಝ್ರತ್ ಅಬ್ಬಾಸ್ ರಝಿಯಲ್ಲಾಹು ಅನ್‌ಹು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೇಸರಗತ್ತೆಯ ಲಗಾಮನ್ನು ಹಿಡಿದಿದ್ದರು. ಸತ್ಯನಿಷೇಧಿಗಳ ಸರದಾರರಾದ ಮಾಲಿಕ್ ಬಿನ್ ಔಫ್ ಒಂದು ಕಣಿವೆಯಲ್ಲಿ ಕುದುರೆ ಸವಾರರೊಂದಿಗೆ ನಿಂತಿದ್ದ. ಕೆಲವು ಕುದುರೆಸವಾರರು ಮುಂದಿನಿಂದ ಬರುತ್ತಿರುವುದಾಗಿ ಅವನು ಕಂಡನು. ಬರುತ್ತಿರುವುದು ಯಾರೆಂದು ಸರದಾರನಾದ ಮಾಲಿಕ್ ಬಿನ್ ಔಫ್ ತನ್ನ ಸಹಚರರೊಡನೆ ಕೇಳಿದನು. ಕುದುರೆಗಳ ಕಿವಿಗಳ ಮಧ್ಯೆ ಈಟಿಯನ್ನು ಇಟ್ಟುಕೊಂಡು ಬರುತ್ತಿರುವ ಕೆಲವು ಜನರಾಗಿರುವರು ಅವರೆಂದು ಆ ಸಹಚರರು ಹೇಳಿಕೊಟ್ಟರು. ಅವನು ಹೇಳಿದ: ಇವರು ಬನೂ ಸಲೀಮ್‌ರವರಾಗಿರುವರು. ಇವರಿಂದ ನಮಗೆ ಯಾವುದೇ ಅಪಾಯವಿಲ್ಲ. ಹೀಗೆ ಅವರು ಬಂದು ಕಣಿವೆ ಕಡೆಯಿಂದ ಹೊರಟು ಹೋದರು. ಸವಾರರಾಗಿರುವ ಇನ್ನೊಂದು ಸಂಘ ಬರುತ್ತಿರುವುದಾಗಿ ಅವರು ಕಂಡರು. ಏನನ್ನು ನೋಡುತ್ತಿದ್ದೀರಿ ಎಂದು ಅವನು ಸಹಚರರೊಡನೆ ಕೇಳಿದನು. ಕೈಯಲ್ಲಿ ಈಟಿಯನ್ನು ಹಿಡಿದುಕೊಂಡು ಕೆಲವು ಜನರು ಬರುತ್ತಿರುವರು ಎಂದು ಸಹಚರರು ಹೇಳಿಕೊಟ್ಟರು. ಅವನು ಹೇಳಿದ: ಇವರು ಔಸ್ ಮತ್ತು ಖಝ್ರಜ್ ಗೋತ್ರದವರಾಗಿರುವರು. ಇವರಿಂದ ನಮಗೆ ಯಾವುದೇ ಅಪಾಯವಿಲ್ಲ. ಅವರು ಸಹ ಕಣಿವೆಯ ಸಮೀಪಕ್ಕೆ ತಲುಪಿದಾಗ ಬನೂ ಸಲೀಮ್‌ರ ಹಾಗೆಯೇ ಜನವಸತಿ ಇರುವ ಕಡೆಗೆ ಹೊರಟುಹೋದರು. ಅನಂತರ ಒಬ್ಬ ಕುದುರೆ ಸವಾರ ಬರುತ್ತಿರುವುದಾಗಿ ಕಂಡರು. ಏನನ್ನು ನೋಡುತ್ತಿದ್ದೀರಿ ಎಂದು ಅವನು ಸಹಚರರೊಡನೆ ಕೇಳಿದನು. ಅವರು ಹೇಳಿದರು: ಉದ್ದ ಮೈಕಟ್ಟಿನ ಒಬ್ಬ ಕುದುರೆಸವಾರ ಬರುತ್ತಿದ್ದಾನೆ. ಅವನ ತೋಳಲ್ಲಿ ಈಟಿಯಿದೆ. ತಲೆಯಲ್ಲಿ ಕೆಂಪು ಬಣ್ಣ ರುಮಾಲನ್ನು ಕಟ್ಟಿರುವನು. ಮಾಲಿಕ್ ಹೇಳಿದ: 'ಇದು ಝುಬೈರ್ ಬಿನ್ ಅವಾಮ್ ಆಗಿರುವರು. ಲಾತ್ ದೇವತೆಯ ಆಣೆ ಇವರೊಂದಿಗೆ ನಿಮ್ಮ ಮುಖಾಮುಖಿಯಾಗುವುದು. ಆದ್ದರಿಂದ ತಮ್ಮ ಹೆಜ್ಜೆಗಳನ್ನು ಗಟ್ಟಿಗೊಳಿಸಿರಿ.' ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಕಣಿವೆಗೆ ತಲುಪಿದಾಗ, ಅವರು ಬಂಡೆಕಲ್ಲಿನ ಹಾಗೆ ನಿಂತಿರುವುದಾಗಿ ಸವಾರರು ನೋಡಿದರು. ಈಟಿಯಿಂದ ಎಂತಹ ಹಲ್ಲೆ ಮಾಡಿದರೆಂದರೆ, ಆ ಕಣಿವೆ ಕಾಫಿರ್ ಸರ್ದಾರರಿಂದ ಖಾಲಿಯಾಯಿತು. (ರೌಶನ್ ಸಿತಾರೆ, ಗುಲಾವ್ ಬಾರಿ ಸೈಫ್ ಸಾಹಿಬ್, ಸಂಪುಟ-2, ಪುಟ-52-53) (ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಸಂಪುಟ-2, ಪುಟ-456, ವಸೀಯ ಮಾಲಿಕ್ ಬಿನ್ ಔಫ್ ಲಿಖೌಮ ವ ಲಿಖಾ, 1955)

ಉರ್‌ವ ತಮ್ಮ ತಂದೆ ಹೇಳಿದ್ದಾಗಿ ವರದಿ ಮಾಡುತ್ತಾರೆ: ಯರ್‌ಮೂಕ್ ಯುದ್ಧದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬಿಯರು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರೊಡನೆ ಕೇಳಿದರು: ನೀವು ಹಲ್ಲೆ ಮಾಡುವುದಿಲ್ಲವೇ? ನೀವು ಹಲ್ಲೆ ಮಾಡುವಾಗ ನಾವು ಸಹ ನಿಮ್ಮೊಂದಿಗೆ ಹಲ್ಲೆ ನಡೆಸುವೆವು. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ಮೊದಲು ಆಕ್ರಮಣ ನಡೆಸಿದರೆ, ನೀವು ಬಹಳ ಹಿಂದೆ ಉಳಿಯುವಿರಿ. ನಾವು ಹಿಂದೆ ಉಳಿಯಲಿಕ್ಕಿಲ್ಲ ಎಂದು ಅವರು ಹೇಳಿದರು. ಹೀಗೆ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಬಹಳ ಶಕ್ತವಾಗಿ ಹಲ್ಲೆ ನಡೆಸುತ್ತಾ ಶತ್ರು ಸೈನ್ಯದ ಪಂಕ್ತಿಗಳನ್ನು ಮುರಿಯುತ್ತಾ ಮುಂದಕ್ಕೆ ಧಾವಿಸಿದರು. ಹಿಂದಕ್ಕೆ ಮುಖ ತಿರುಗಿಸಿ ನೋಡಿದಾಗ ಅವರ ಬಳಿಗೆ ಯಾರೂ ತಲುಪಿರಲಿಲ್ಲ ಎಂದು ಅವರು ಕಂಡರು. ಅವರು ಮರಳಿ ಬರುವಾಗ ಸತ್ಯನಿಷೇಧಿಗಳು ಅವರ ಕುದುರೆಯ ಲಗಾಮನ್ನು ಹಿಡಿದರು. ಅವರ ಭುಜದ ಮೇಲೆ ಎರಡು ಗಾಯಗಳನ್ನು ಮಾಡಿದರು. ಅವರ ಹೆಗಲಲ್ಲಿ ಬದ್ರ್ ಯುದ್ಧದ ವೇಳೆಯಲ್ಲಿ ಉಂಟಾದ ಆಳವಾದ ಗಾಯವೂ ಇತ್ತು. ಉರ್‌ವ ಹೇಳುತ್ತಾರೆ: ನಾನು ಸಣ್ಣವನಿದ್ದಾಗ ನಾನು ನನ್ನ ಬೆರಳುಗಳನ್ನು ಆ ಮಾಸಿದ ಗಾಯದ ಒಳಗೆ ಹಾಕಿ ಆಟವಾಡುತ್ತಿದ್ದೆನು. ಉರ್‌ವ ಹೇಳುತ್ತಾರೆ:

ಯರ್‌ಮೂಕ್ ಯುದ್ಧದಲ್ಲಿ ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರೊಂದಿಗೆ ಅಬ್ದುಲ್ಲಾಹ್ ಬಿನ್ ಝುಬೈರ್ ಸಹ ಇದ್ದರು. ಆಗ ಅವರಿಗೆ ಹತ್ತು ವರ್ಷ ಪ್ರಾಯವಿದ್ದಿತ್ತು. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಮಗನನ್ನು ಕುದುರೆಯಲ್ಲಿ ಸವಾರಿ ಮಾಡಿಸಿ ತನ್ನೊಂದಿಗೆ ಕರೆದುಕೊಂಡು ಹೋಗಿದ್ದರು. ಒಬ್ಬ ವ್ಯಕ್ತಿಯನ್ನು ಮಗನ ಸಂರಕ್ಷಣೆಗಾಗಿ ನಿಶ್ಚಯಿಸಲಾಗಿತ್ತು. (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಬಾಬ್ ಖತಲ್ ಅಬಿ ಜಹಲ್, ಹದೀಸ್–3975)

ಶಾಮ್ ವಿಜಯದ ನಂತರ ಹಝ್ರತ್ ಅಮ್ರ್ ಬಿನ್ ಆಸ್‌ರ ನೇತೃತ್ವದಲ್ಲಿ ಈಜಿಪ್ಟ್ ಮೇಲೆ ಆಕ್ರಮಣ ನಡೆಯಿತು. ಹಝ್ರತ್ ಅಮ್ರ್ ಬಿನ್ ಆಸ್‌ರ ನೇತೃತ್ವದಲ್ಲಿ ಅಲೆಕ್ಸಾಂಡ್ರಿಯಾದ ಮೇಲೆ ಆಕ್ರಮಣ ನಡೆಸಲು ಮುಸ್ಲಿಮರು ಉದ್ದೇಶಿಸಿದರು. ಅಲೆಕ್ಸಾಂಡ್ರಿಯಾದ ದಕ್ಷಿಣ ದಿಕ್ಕಿನಲ್ಲಿ ನೈಲ್ ನದಿಯ ತೀರದಲ್ಲಿ ಡೇರೆಗಳನ್ನು ಹಾಕಿದರು. ಆದ್ದರಿಂದ ಈ ಪ್ರದೇಶವನ್ನು ಫಿಸ್‌ತಾತ್ ಎಂದು ಹೇಳಲಾಗುತ್ತದೆ. ಈ ಪ್ರದೇಶ ಅನಂತರ ಒಂದು ಪಟ್ಟಣವಾಯಿತು. ಇದೇ ಪಟ್ಟಣದ ಹೊಸ ಭಾಗವನ್ನು ಇಂದು ಕಾಹಿರ ಎಂದು ಹೇಳಲಾಗುತ್ತಿದೆ. ಮುಸ್ಲಿಮರು ಈ ಫಿಸ್‌ತಾತ್ ಪಟ್ಟಣವನ್ನು ಸುತ್ತುವರೆದರು. ಹಝ್ರತ್ ಅಮ್ರ್ ಬಿನ್ ಆಸ್‌ರವರು ತನ್ನ ಮುಂದೆ ದೃಢವಾದ ಗಟ್ಟಿ ಕೋಟೆಯನ್ನು ಮತ್ತು ತನ್ನ ಸೈನ್ಯದ ಅಂಗಬಲದ ಕೊರತೆಯನ್ನು ಕಂಡಾಗ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರೊಡನೆ ತನ್ನ ನೆರವಿಗಾಗಿ ಒಂದು ಸೈನ್ಯವನ್ನು ಕಳುಹಿಸಲು ವಿನಂತಿಸಿದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹತ್ತು ಸಾವಿರ ಸೈನಿಕರನ್ನು ಮತ್ತು ನಾಲ್ಕು ಅಧಿಕಾರಿಗಳನ್ನು ಕಳುಹಿಸಿದರು. ಇವರಲ್ಲಿ ಪ್ರತಿಯೊಬ್ಬ ಅಧಿಕಾರಿ ಒಂದು ಸಾವಿರ ಸೈನಿಕರಿಗೆ ಸಮಾನರು ಎಂದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳಿದರು. ಅವರಲ್ಲಿ ಒಬ್ಬರು ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಆಗಿದ್ದರು. ಅವರು ಅಲ್ಲಿಗೆ ತಲುಪಿದಾಗ ಹಝ್ರತ್ ಅಮ್ರ್ ಬಿನ್ ಆಸ್ ಮುತ್ತಿಗೆಯ ಏರ್ಪಾಡುಗಳನ್ನು ಅವರಿಗೆ ವಹಿಸಿಕೊಟ್ಟರು. ಅವರು ಕುದುರೆಯಲ್ಲಿ ಸವಾರರಾಗಿ ಕೋಟೆಯ ಆಸುಪಾಸು ಸುತ್ತಾಡಿ ಸ್ಥಿತಿಗತಿಗಳನ್ನು ಅವಲೋಕಿಸಿದರು. ಸೈನ್ಯವನ್ನು ಸರಿಪಡಿಸಿದರು. ಸವಾರರನ್ನು ಮತ್ತು ಕಾಲಾಳುಗಳನ್ನು ಬೇರೆ ಬೇರೆಯಾಗಿ ನಿಶ್ಚಯಿಸಿದರು. ಬಹಳ ದೊಡ್ಡದಾದ ಕವಣೆಯಿಂದ ಕೋಟೆಯ ಮೇಲೆ ಕಲ್ಲುಗಳನ್ನು ಎಸೆಯಲು ಶುರು ಮಾಡಿಸಿದರು. ಏಳು ತಿಂಗಳ ವರೆಗೆ ಮುತ್ತಿಗೆ ಜಾರಿಯಲ್ಲಿತ್ತು. ವಿಜಯ ಅಥವಾ ಪರಾಜಯದ ಯಾವುದೇ ತೀರ್ಮಾನವಾಗುತ್ತಿರಲಿಲ್ಲ. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಒಂದು ದಿನ ಹೇಳಿದರು: ನಾನಿಂದು ಮುಸ್ಲಿಮರಿಗಾಗಿ ಅರ್ಪಣೆಯಾಗುವೆನು. ಹೀಗೆ ಹೇಳಿ ಖಡ್ಗವನ್ನು ಕೈಯಲ್ಲಿ ಹಿಡಿದು ಏಣಿ ಹಾಕಿ ಕೋಟೆಯ ಗೋಡೆಯ ಮೇಲೆ ಏರಿದರು. ಕೆಲವು ಇತರ ಸಹಾಬಿಯರು ಅವರೊಂದಿಗೆ ಸೇರಿದರು. ಗೋಡೆಯ ಮೇಲೆ ತಲುಪಿದ ನಂತರ ಎಲ್ಲರೂ ಒಟ್ಟಿಗೆ ಅಲ್ಲಾಹು ಅಕ್ಬರ್ ಎಂದು ಉಚ್ಚಸ್ವರದಲ್ಲಿ ಘೋಷಿಸಿದರು. ಇವರೊಂದಿಗೆ ಕೋಟೆಯು ದಿಗಿಲುಗೊಳ್ಳುವ ರೀತಿಯಲ್ಲಿ ಸಂಪೂರ್ಣ ಸೈನ್ಯ ಸಹ ಉಚ್ಚ ಸ್ವರದಲ್ಲಿ ತಕ್ಬೀರ್ ಹೇಳಿದರು. ಮುಸ್ಲಿಮರು ಕೋಟೆಯ ಒಳಗೆ ನುಗ್ಗಿರುವರು ಎಂದು ಭಾವಿಸಿ ಕ್ರೈಸ್ತರು ಹುಚ್ಚರಂತೆ ಓಡಲು ತೊಡಗಿದರು. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ಗೋಡೆಯಿಂದ ಇಳಿದು ಕೋಟೆಯ ಬಾಗಿಲನ್ನು ತೆರೆದರು. ಪೂರ್ತಿ ಸೈನ್ಯ ಒಳಗೆ ನುಗ್ಗಿತು.
(ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್ ಸಾಹಿಬ್, ಸಂಪುಟ–2, ಪುಟ–54–55) (ಮುಜಮುಲ್ ಬಲದಾನ್, ಪುಟ–259, ಮತ್‌ಬುಅಲ್ ಫಸೀಲ್ ಉರ್ದು ಬಾಝಾರ್ ಲಾಹೋರ್ 2013)

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಮರಣದ ಸಮಯದಲ್ಲಿ ಖಿಲಾಫತ್ ಸಮಿತಿಯ ಸದಸ್ಯರ ಹೆಸರು ಸೂಚಿಸುವಿಕೆ ಮತ್ತು ಮರಣದ ನಂತರ ಖಿಲಾಫತಿನ ಆಯ್ಕೆಯ ಘಟನೆ ಬುಖಾರಿಯಲ್ಲಿ ಹೀಗೆ ವರದಿಯಾಗಿದೆ: ಹಝುರತ್ ಉಮರ್ ರಝಿಯಲ್ಲಾಹು ಅನ್‌ಹುರ ಮರಣಕ್ಕೆ ಸ್ವಲ್ಪ ಮುಂಚೆಜನರು ಅವರೊಡನೆ ಹೇಳಿದರು: ಅಮೀರ್ ಮೂಮಿನೀನ್, ಖಿಲಾಫತಿಗಾಗಿ ಯಾರನ್ನು ನಿಶ್ಚಯಿಸಬೇಕೆಂದು ವಸಿಯ್ಯತ್ ಮಾಡಿರಿ. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳಿದರು: ಕೆಲವು ವ್ಯಕ್ತಿಗಳನ್ನು ಹೊರತು ಬೇರೆ ಯಾರನ್ನೂ ಖಿಲಾಫತಿನ ಹಕ್ಕುದಾರರೆಂದು ನಾನು ಭಾವಿಸುವುದಿಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ವ್ಯಕ್ತಿಗಳೊಡನೆ ತಮ್ಮ ಸಂತೃಪ್ತಿಯನ್ನು ಸೂಚಿಸಿದ್ದರು. ಅವರುಹಝ್ರತ್ ಅಲಿ(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಝುಬೈರ್, ಹಝ್ರತ್ ತಲ್‌ಹ, ಹಝ್ರತ್ ಸಅದ್, ಹಝ್ರತ್ ಅಬ್ದುರಹ್ಮಾನ್ ಬಿನ್ ಔಫ್‌ರ(ರ) ಆಗಿರುವರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಅನಂತರ ಹೀಗೆ ಹೇಳಿದರು: ಅಬ್ದುಲ್ಲಾಹ್ ಬಿನ್ ಉಮರ್ ನಿಮ್ಮೊಡನೆ ಭಾಗಿಯಾಗುವನು, ಆದರೆ ಖಿಲಾಫತಿನಲ್ಲಿ ಅವನಿಗೆ ಯಾವುದೇ ಹಕ್ಕು ಇರಲಾರದು. ಖಿಲಾಫತ್ ಸಅದ್ ಬಿನ್ ಅಬೀ ವಖಾಸರಿಗೆ ಲಭಿಸಿದರೆ, ಅವರೇ ಖಲೀಫರಾಗಲಿ. ಅನ್ಯಥಾ ನಿಮ್ಮಲ್ಲಿ ಯಾರೇ ಖಲೀಫರಾಗಲಿ, ಅವರು ಸಅದ್‌ರಿಂದ ನೆರವು ಪಡೆಯುತ್ತಿರಲಿ. ಏಕೆಂದರೆ ಅವರು ಯಾವುದೇ ಕೆಲಸವಾಡಲು ಅಶಕ್ತರಾದ ಕಾರಣದಿಂದ ನಾನು ಅವರನ್ನು ಪದಚ್ಯುತಿಗೊಳಿಸಿರಲಿಲ್ಲ ಅಥವಾ ಅವರು ಯಾವುದೇ ಮೋಸ ಕೂಡ ಮಾಡಿರಲಿಲ್ಲ. ನನ್ನ ನಂತರ ಬರುವ ಖಲೀಫರಿಗೆ ನಾನು ಮೊದಲು ಮುಹಾಜಿರುಗಳ ಬಗ್ಗೆ ವಸಿಯ್ಯತ್ ಮಾಡುತ್ತೇನೆ. ಅವರು ಮುಹಾಜಿರುಗಳಿಗೆ ಅವರ ಹಕ್ಕನ್ನು ನೀಡಬೇಕು ಮತ್ತು ಅವರ ಗೌರವದ ಬಗ್ಗೆ ಗಮನಹರಿಸಬೇಕು. ಅದೇ ರೀತಿಯಲ್ಲಿ ಅನ್ಸಾರ್‌ರೊಡನೆ ಸಹ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದು ನಾನು ವಸಿಯ್ಯತ್ ಮಾಡುತ್ತೇನೆ. ಅವರು ಮುಹಾಜಿರುಗಳಿಗೆ ಮುಂಚಿತವಾಗಿ ತಮ್ಮ ಮನೆಗಳಲ್ಲಿ ಸತ್ಯವಿಶ್ವಾಸಕ್ಕೆ ಎಡೆ ಮಾಡಿಕೊಟ್ಟಿದ್ದರು. ಅವರಲ್ಲಿ ಸತ್ಕರ್ಮ ಮಾಡುವವರನ್ನು ಸ್ವೀಕರಿಸಬೇಕು ಮತ್ತು ಅವರಲ್ಲಿ ತಪ್ಪು ಮಾಡುವವರನ್ನು ಕ್ಷಮಿಸಬೇಕು. ಪಟ್ಟಣದಲ್ಲಿ ನೆಲೆಸಿರುವ ಎಲ್ಲರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದು ನಾನು ನನ್ನ ನಂತರ ಬರುವ ಖಲೀಫರಿಗೆ ವಸಿಯ್ಯತ್ ಮಾಡುತ್ತೇನೆ. ಏಕೆಂದರೆ ಅವರು ಇಸ್ಲಾಮಿನ ಬೆನ್ನೆಲುಬು ಆಗಿರುವರು. ಸಂಪತ್ತನ್ನು ನೀಡುವವರಾಗಿರುವರು ಮತ್ತು ಶತ್ರುಗಳನ್ನು ಪ್ರತಿರೋಧಿಸುವವರಾಗಿರುವರು. ಅವರ ಆವಶ್ಯಗಳ ನಂತರ ಬಾಕಿಯಾಗುವುದರಿಂದ ಅವರ ಸಂತೃಪ್ತಿಯೊಂದಿಗೆ ಅವರಿಂದ ಸಂಪತ್ತನ್ನು ಪಡೆಯಬೇಕು. ಮರಳುಗಾಡಿನ ಅರಬರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲು ನಾನು ಬರುವ ಖಲೀಫರಿಗೆ ವಸಿಯ್ಯತ್ ಮಾಡುತ್ತೇನೆ. ಏಕೆಂದರೆ, ಅವರು ಅರಬರ ಬೇರಾಗಿರುವರು. ಇಸ್ಲಾಮಿನ ಸತ್ವವಾಗಿರುವರು. ಅವರಿಂದ ಅವರಿಗೆ ಆವಶ್ಯವಿಲ್ಲದ ಸಂಪತ್ತಿನಿಂದ ಧನ ವಸೂಲು ಮಾಡಬೇಕು. ಅನಂತರ ಅವರಲ್ಲೇ ಇರುವ ನಿರ್ಗತಿಕರಿಗೆ ಅದನ್ನು ಕೊಡಬೇಕು. ನಾನು ಖಲೀಫರನ್ನು ಅಲ್ಲಾಹನ ಮತ್ತು ಅವನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜವಾಬ್ದಾರಿಯ ಮೇಲೆ ಒಪ್ಪಿಸುತ್ತೇನೆ. ಯಾವ ಜನರಿಂದ ಪ್ರತಿಜ್ಞೆ ಪಡೆಯಲಾಯಿತೋ ಆ ಜನರ ಪ್ರತಿಜ್ಞೆಗಳನ್ನು ಈಡೇರಿಸಬೇಕು. ಜನರ ಸಂರಕ್ಷಣೆಗಾಗಿ ಸುರಕ್ಷೆಯ ಏರ್ಪಾಡು ಮಾಡಬೇಕು. ಅವರಿಂದಲೂ ಅವರ ಸಾಮರ್ಥ್ಯಕ್ಕೆ ಅನುಸಾರ ಮಾತ್ರವೇ ವಸೂಲು ಮಾಡಬೇಕು. ಹಝ್ರತ್ ಉಮರ್ ರಝಿಯಲ್ಲಾಹು ವಫಾತ್ ಆದ ಮೇಲೆ ಅವರನ್ನು ದಫನ್ ಮಾಡಿದ ನಂತರ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೆಸರು ಸೂಚಿಸಿದ 6 ವ್ಯಕ್ತಿಗಳು ಒಟ್ಟುಗೂಡಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳಿದರು: ಈ ಕಾರ್ಯವನ್ನು ನಮ್ಮಲ್ಲಿರುವ ಯಾರಾದರೂ ಮೂರು ವ್ಯಕ್ತಿಗಳಿಗೆ ವಹಿಸಿಕೊಡಿರಿ. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹು ತನ್ನ ಅಧಿಕಾರವನ್ನು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ನೀಡಿದರು. ಹಝ್ರತ್ ತಲ್‌ಹ ರಝಿಯಲ್ಲಾಹು ಅನ್‌ಹು ತನ್ನ ಆಯ್ಕೆಯನ್ನು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರಿಗೆ ಒಪ್ಪಿಸಿದರು. ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು ತನ್ನ ಅಧಿಕಾರವನ್ನು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ರಝಿಯಲ್ಲಾಹು ಅನ್‌ಹುರಿಗೆ ನೀಡಿದ್ದರು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರೊಡನೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ರಝಿಯಲ್ಲಾಹು ಅನ್‌ಹು ಹೇಳಿದರು: ನಿಮ್ಮಿಬ್ಬರಲ್ಲಿ ಯಾರು ಈ ಸಂಗತಿಯಿಂದ ಬಿಟ್ಟು ನಿಲ್ಲುತ್ತಾರೋ, ಅವರು ಮರುವ್ಯಕ್ತಿಯನ್ನು ಆಯ್ಕೆ ಮಾಡಲಿ. ಅಲ್ಲಾಹನು ಮತ್ತು ಇಸ್ಲಾಮ್ ಅವರ ಮೇಲ್ನೋಟಗಾರನಾಗುವನು. ನಿಮ್ಮಬ್ಬರಲ್ಲಿ ಶ್ರೇಷ್ಠನು ಇನ್ನೊಬ್ಬನನ್ನು ಆಯ್ಕೆ ಮಾಡಲಿ. ಇದನ್ನು ಕೇಳಿ ಅವರಿಬ್ಬರು ಮೌನವಾದರು. ಹಝ್ರತ್ ಅಬ್ದುರ್ರಹ್ಮಾನ್ ರಝಿಯಲ್ಲಾಹು ಅನ್‌ಹು ಅವರಿಬ್ಬರೊಡನೆ ಕೇಳಿದರು: ಈ ಕಾರ್ಯದ ತೀರ್ಮಾನವನ್ನು ನನಗೆ ಒಪ್ಪಿಸುತ್ತೀರಾ? ಅಲ್ಲಾಹನು ನನ್ನ ಮೇಲ್ನೋಟಗಾರನಾಗಿರುವನು. ನಿಮ್ಮಲ್ಲಿ ಶ್ರೇಷ್ಠರಾದವರನ್ನು ಆಯ್ಕೆ ಮಾಡುವುದರಲ್ಲಿ ಯಾವುದೇ ನ್ಯೂನತೆಯನ್ನು ನಾನು ಮಾಡುವುದಿಲ್ಲ. ಸರಿಯೆಂದು ಅವರಿಬ್ಬರೂ ಹೇಳಿದರು. ಆಗ ಅಬ್ದುರ್ರಹ್ಮಾನ್ ರಝಿಯಲ್ಲಾಹು ಅನ್‌ಹು ಅವರಿಬ್ಬರಲ್ಲಿ ಒಬ್ಬರ ಕೈಯನ್ನು ಹಿಡಿದು ಅವರನ್ನು ಕಡೆಗೆ ಸರಿಸಿ ನಿಲ್ಲಿಸಿ ಹೇಳಿದರು: ನಿಮಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸಂಬಂಧವಿದೆ. ಇಸ್ಲಾಮಿನಲ್ಲಿ ನಿಮಗಿರುವ ಸ್ಥಾನವನ್ನು ನೀವೇ ಬಲ್ಲಿರಿ. ನಾನು ನಿಮ್ಮನ್ನು ಅಮೀರರನ್ನಾಗಿ ಮಾಡಿದರೆ ನೀವು ನ್ಯಾಯಪಾಲನೆ ಮಾಡುತ್ತೀರಿ ಮತ್ತು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರನ್ನು ಅಮೀರರನ್ನಾಗಿ ನಿಶ್ಚಯಿಸಿದರೆ ನೀವು ಅವರ ಮಾತುಗಳನ್ನು ಕೇಳುತ್ತೀರಿ ಮತ್ತುಅವರ ಆಜ್ಞೆಗಳನ್ನು ಅನುಸರಿಸುತ್ತೀರಿ ಎಂದು ಪ್ರತಿಜ್ಞೆ ಮಾಡಿರಿ ಎಂದು ಹೇಳಿದರು. ಅನಂತರ ಎರಡನೇ ವ್ಯಕ್ತಿಯನ್ನು ಏಕಾಂಗಿಗೊಳಿಸಿ ಅವರೊಡನೆಯೂ ಹೀಗೆಯೇ ಕೇಳಿದರು. ಅವರಿಬ್ಬರಿಂದಲೂ ದೃಢ ಪ್ರತಿಜ್ಞೆ ಪಡೆದ ನಂತರ ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರೊಡನೆ ಹಝ್ರತ್ ಅಬ್ದುರ್ರಹ್ಮಾನ್ ರಝಿಯಲ್ಲಾಹು ಅನ್‌ಹು ಕೈಯನ್ನು ಎತ್ತಲು

ಹೇಳಿ ಅವರ ಕೈಯಲ್ಲಿ ಬೈಅತ್ ಮಾಡಿದರು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಸಹ ಅವರ ಕೈಯಲ್ಲಿ ಬೈಅತ್ ಮಾಡಿದರು. ಮನೆಯವರು ಒಳಗೆ ಹೋಗಿ ಅವರೆಲ್ಲರೂ ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಕೈಯಲ್ಲಿ ಬೈಅತ್ ಮಾಡಿದರು. (ಸಹೀಹ್ ಬುಖಾರಿ, ಕಿತಾಬುಲ್ ಫಝಾಎಲು ಅಸ್‌ಹಾಬ್, ಹದೀಸ್–3700)

ಹೇಗಿದ್ದರೂ ಈ ವಿಷಯಗಳನ್ನು ಕೆಲವು ಕಾಲ ಮುಂಚೆ ನಾನು ವಿವರಿಸಿದ್ದೆ. ಇಲ್ಲಿಯೂ ಅದಕ್ಕೆ ಸಂಬಂಧಿಸಿ ಸ್ವಲ್ಪ ವಿವರಿಸಿದೆ ಅಷ್ಟೆ. ಹಝ್ರತ್ ಝುಬೈರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿದೆ. ಉಳಿದ ಭಾಗ ಮುಂದಿನ ಬಾರಿ ವಿವರಿಸಲಾಗುವುದು.

ಈಗ ನಾನು ನಿರ್ವಹಿಸಲಿರುವ ಕೆಲವು ಜನಾಝದ ಬಗ್ಗೆ ಹೇಳುತ್ತೇನೆ. ಮೊದಲ ಜನಾಝ ಸನ್ಮಾನ್ಯ ಮೀರಾಜ್ ಅಹ್ಮದ್ ಸಾಹಿಬ್ ಶಹೀದ್ ಸನ್ ಆಫ್ ಮಹ್ಮೂದ್ ಅಹ್ಮದ್ ಸಾಹಿಬ್ ಆಫ್ ಡೋಗ್ರಿ ಗಾರ್ಡನ್ ಪಿಶಾವರ್ ಜಿಲ್ಲೆಯವರದ್ದಾಗಿದೆ. ಅವರನ್ನು ಅಹ್ಮದಿಯ್ಯತಿನ ವಿರೋಧಿಗಳು ಆಗಸ್ಟ್ 12ರ ರಾತ್ರಿ 9ಗಂಟೆಗೆ ಅವರ ಮೆಡಿಕಲ್ ಸ್ಟೋರಿನ ಮುಂದೆ ಫೈರಿಂಗ್ ಮಾಡಿ ಶಹೀದ್ ಮಾಡಿದರು. **ಇನ್ನಾ ಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.**

ವಿಶದ ವಿವರ ಹೀಗಿದೆ: ದಿವಂಗತರು ತಮ್ಮ ಮೆಡಿಕಲ್ ಸ್ಟೋರಿಂದ ತಮ್ಮ ಕೆಲಸವನ್ನು ಮುಗಿಸಿ 9 ಗಂಟೆ ರಾತ್ರಿ ಮನೆಗೆ ಹೊರಡುತ್ತಿದ್ದರು. ಅಪರಿಚಿತರು ಫೈರಿಂಗ್ ಮಾಡಿ, ಅಲ್ಲಿಂದ ಪರಾರಿಯಾದರು. ಶಹೀದ್‌ರಿಗೆ ನಾಲ್ಕು ಗುಂಡುಗಳು ತಗುಲಿದುವು. ಅದರಿಂದ ಅವರು ಸ್ಥಳದಲ್ಲೇ ವಫಾತ್ ಆದರು. ಶಹಾದತ್ ಸಮಯದಲ್ಲಿ ಅವರಿಗೆ ಸುಮಾರು 61 ವಯಸ್ಸಾಗಿತ್ತು. ಶಹೀದಿನ ಮಗನಾದ ಯಾಸಿರ್ ಅಹ್ಮದ್ ಸಂಭವಕ್ಕೆ ಕೆಲವು ನಿಮಿಷಗಳಿಗೆ ಮುಂಚಿತವಾಗಿ ಮನೆಗೆ ಹೊರಟಿದ್ದರು. ಶಹೀದಿನ ಮೊಬೈಲಿನಿಂದ ಮಗನಿಗೆ ಘಟನೆಯ ವಿವರ ತಿಳಿಸಲಾಯಿತು. ಮಗನು ಮರಳಿ ಮೆಡಿಕಲ್ ಸ್ಟೋರಿಗೆ ತಲುಪಿದಾಗ ಅವರು ನಿಧನಹೊಂದಿದ್ದರು. ಶಹೀದಿನ ಕುಟುಂಬದಲ್ಲಿ ಅಹ್ಮದಿಯ್ಯತಿನ ಪ್ರವೇಶ ಅವರ ತಾತರಾದ ಸನ್ಮಾನ್ಯ ಅಹ್ಮದ್ ಗುಲ್ ಸಾಹಿಬ್ ಮತ್ತು ಅವರ ಸಹೋದರ ಸನ್ಮಾನ್ಯ ಸಾಹಿಬ್ ಗುಲ್ ಸಾಹಿಬರ ಮೂಲಕ 1912ರಲ್ಲಿ ಆಯಿತು. ಅವರು ಪುಶ್ತು ಭಾಷೆಯ ಪ್ರಸಿದ್ಧ ಕವಿಯಾಗಿದ್ದರು. ಆ ಕುಟುಂಬದ ಸಂಬಂಧ ಶೇಖ್ ಮುಹಮ್ಮದೀ ಪಿಶಾವರ್‌ರೊಂದಿಗೆ ಆಗಿತ್ತು. ಅನಂತರ ಈ ಕುಟುಂಬ ಗೈರ್ ಮುಬಾಈನ್‌ರೊಂದಿಗೆ ಸೇರಿತು. ಎಂದರೆ ಲಾಹೋರಿ ಜಮಾಅತಿನೊಂದಿಗೆ ಸಂಬಂಧವಿರಿಸಿತು. ಖಿಲಾಫತಿನ ಕೈಯಲ್ಲಿ ಬೈಅತ್ ಮಾಡಿರಲಿಲ್ಲ. ಸನ್ಮಾನ್ಯ ಮೀರಾಜ್ ಸಾಹಿಬರು ತಮ್ಮ ಮೂರು ಸಹೋದರರೊಂದಿಗೆ ಸ್ವತಃ 1990–91ರಲ್ಲಿ ಬೈಅತ್ ಮಾಡಿ ಅಹ್ಮದಿಯಾ ಜಮಾಅತಿಗೆ ಸೇರಿದರು. ಅದರ ನಂತರ ಅವರೊಂದಿಗೆ ವಿರೋಧದ ಪರಂಪರೆ ಅವರ ಈ ಶಹಾದತ್ ತನಕ ಜಾರಿಯಲ್ಲಿತ್ತು. ಅವರೊಂದಿಗೆ ಕೆಲಸಮಾಡುವ ಕಾರ್ಮಿಕರು ಸಹ ಇದರ ನಂತರ ಕೇವಲ ಧಾರ್ಮಿಕ ವಿರೋಧದ ಕಾರಣ ಅವರೊಂದಿಗೆ ಕೆಲಸ ಮಾಡಲು ತಯಾರಾಗಿರಲಿಲ್ಲ. ಸೋಶಿಯಲ್ ಮೀಡಿಯಾದಲ್ಲೂ ಕೆಲವು ಕಾಲದಿಂದ ಶಕ್ತವಾದ ವಿರೋಧದ ಅಲೆ ಎಬ್ಬಿಸಲಾಗಿತ್ತು. ರಬ್ವದ ತಾಹಿರ್ ನಸೀಮ್ ಕೊಲ್ಲಲ್ಪಟ್ಟ ನಂತರ ವಿರೋಧ ಇನ್ನೂ ಹೆಚ್ಚಾಯಿತು. ಇದೇ ಹಿನ್ನೆಲೆಯಲ್ಲಿ ಆ ಪ್ರದೇಶದಲ್ಲಿ ಈದ್ ಹಬ್ಬದ ನಂತರ ಖಾದಿಯಾನಿಗಳ ವಿರುದ್ಧ ಶಕ್ತವಾದ ಕಾರ್ಯಚರಣೆ ನಡೆಸುವ ಯೋಜನೆ ಕೈಗೊಳ್ಳಲಾಯಿತು. ಅವರ ಪ್ರದೇಶದಿಂದ ಖಾದಿಯಾನತನ್ನು ಕೊನೆಗೊಳಿಸುವೆವು ಎಂದು ಹೇಳಿದ್ದರು. ಅವರ ಮುಂದಿನ ಟಾರ್ಗಟ್ ಶಹೀದ್ ನೆಲೆಸಿದ್ದ ಸ್ಥಳವಾಗಿತ್ತು. ಶಹೀದ್ ಮರ್‌ಹೂಮ್ ಉತ್ತಮವಾದ ವೈಶಿಷ್ಟ್ಯಗಳಿಂದ ಕೂಡಿದ್ದ ವ್ಯಕ್ತಿಯಾಗಿದ್ದರು. ಮನೆಯಲ್ಲಿ ಬಾಜಮಾಅತ್ ನಮಾಝ್ ಮಾಡುವ ವ್ಯವಸ್ಥೆ ಮಾಡಲಾಗಿತ್ತು. ಖಿಲಾಫತ್‌ನೊಂದಿಗೆ ಅಪರಿಮಿತವಾದ ವಿಶ್ವಾಸ ಮತ್ತು ನಿಷ್ಠೆ ಅವರಿಗೆ ಇತ್ತು. ಎಂ.ಟಿ.ಎ.ಯಲ್ಲಿ ಖುತ್‌ಬಗಳನ್ನು ಕೇಳಲು ವಿಶೇಷವಾದ ಗಮನಹರಿಸುತ್ತಿದ್ದರು. ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು ಅಲ್ಲದೆ, ಅತಿಥಿ ಸತ್ಕಾರ, ಜನರೊಡನೆ ಪ್ರೀತಿ, ದರಿದ್ರರಿಗೆ ಸಹಾಯ ಮಾಡುವುದು ಇವರ ವಿಶೇಷವಾದ ಗುಣಗಳಾಗಿದ್ದುವು. ನಿರ್ಗತಿಕರಿಗೆ ಉಚಿತವಾಗಿ ಔಷಧಿಗಳನ್ನು ನೀಡುತ್ತಿದ್ದರು. ಕುಟುಂಬದ ಪ್ರತಿ ವ್ಯಕ್ತಿಯೊಂದಿಗೆ ಸಹಾನುಭೂತಿಯ ಸಂಬಂಧವಿರಿಸಿದ್ದರು. ಸಹೋದರರ ಕುಟುಂಬದೊಂದಿಗೂ ಪ್ರೀತಿಯ ಉತ್ತಮ ಸಂಬಂಧವನ್ನು ಇರಿಸಿದ್ದರು. ಸಹೋದರರೊಂದಿಗೆ ಇರುವ ಪ್ರೀತಿ ಅಹ್ಮದಿಯ್ಯತ್ ಸ್ವೀಕಾರದ ನಂತರ ಇನ್ನೂ ವರ್ಧಿಸಿತ್ತು. ಬಹಳ ಉತ್ಸಾಹದಿಂದ ತಬ್ಲೀಗ್ ಮಾಡುತ್ತಿದ್ದರು. ತಹ್ರೀಕ್ ಜದೀದಿನ ಹೊಸ ವರ್ಷದ ಘೋಷಣೆಯ ನಂತರ ವಾಗ್ದಾನ ಬರೆಸಲು ಜಮಾಅತಿನವರು ಬಂದಾಗ ಅವರು ತಮ್ಮ ಜೇಬಲ್ಲಿ ಇದ್ದ ಹಣವನ್ನೇ ವಾಗ್ದಾನವಾಗಿ ಬರೆಸಿ ಚಂದಾ ಪಾವತಿಸಿದ್ದರು. ಅವರ ಮಗನಾದ ಯಾಸಿರ್ 2012ರಲ್ಲಿ ಆಸ್ಟ್ರೇಲಿಯಾಗೆ ವಲಸೆ ಹೋಗಿದ್ದರು. 2013ರಲ್ಲಿ ಶಹೀದ್ ಮರ್‌ಹೂಮ್ ಸಹ ತಮ್ಮ ಮಗನೊಂದಿಗೆ ಇರಲು ಆಸ್ಟ್ರೇಲಿಯಾಗೆ ಹೋಗಿದ್ದರು. ಆದರೆ 2014ರಲ್ಲಿ ತನ್ನ ಮಗನೊಂದಿಗೆ ಪಾಕಿಸ್ತಾನಕ್ಕೆ ಮರಳಿಬಂದರು. ನನ್ನ ಪ್ರದೇಶ ಮತ್ತು ದೇಶದಲ್ಲೇ ಇದ್ದು ಬಡಜನರ ಸೇವೆ ಮಾಡುವುದಾಗಿದೆ ನನ್ನ ಇಚ್ಛೆ, ದೇಶಪ್ರೇಮ ನನ್ನನ್ನು ಪಾಕಿಸ್ತಾನದಲ್ಲಿ ನೆಲೆಸಲು ನಿರ್ಬಂಧಿಸುತ್ತಿದೆ ಎಂದು ಅವರು ಹೇಳಿದ್ದರು.

ನಾನು ಆಸ್ಟ್ರೇಲಿಯಾಗೆ ಹೋದಾಗ ನನ್ನನ್ನು ಭೇಟಿಯಾಗಿದ್ದರು. ದೀರ್ಘಕಾಲದಿಂದ ಪಿಶಾವರ್ ಜಮಾಅತಿನ ಸೆಕ್ರಟರಿ ಝಿಯಾಫತ್ ಆಗಿದ್ದರು. ಅಹ್ಮದಿಯರು ದೇಶಪ್ರೇಮದಿಂದ ಎಲ್ಲ ತ್ಯಾಗಕ್ಕೂ ತಯಾರಾಗಿರುತ್ತಾರೆ. ಆದರೆ ದೇಶದ ನಾಮಧಾರಿಗಳಾದ ಈ ಗುತ್ತೇದಾರರಿಗೆ ಅಹ್ಮದಿಯರ ಮೇಲೆ ಆರೋಪ ಹೊರಿಸುವುದರ ಮತ್ತು ನಷ್ಟ ಉಂಟು ಮಾಡುವುದರ ಹೊರತು ಬೇರೆ ಕೆಲಸವಿಲ್ಲ. ಹೇಗಿದ್ದರೂ ಅಹ್ಮದಿಯ್ಯತಿನ ಅದೃಷ್ಟದಲ್ಲಿರುವುದರ ಪ್ರಕಾರ ಕಾರ್ಯಗಳು ನಡೆಯುವುವು. ದೀರ್ಘಕಾಲದಿಂದ ಪಿಶಾವರ್ ಜಮಾಅತಿನ ಅತಿಥಿ ಸತ್ಕಾರ ವಿಭಾಗದ ಸೆಕ್ರಟರಿಯಾಗಿದ್ದರು. ಮರಣದ ವರೆಗೆ ಆ ಹುದ್ದೆಯಲ್ಲಿ ಸೇವೆ ಮಾಡುವ ಸೌಭಾಗ್ಯ ಅವರಿಗೆ ಲಭಿಸಿತ್ತು. ಕಳೆದ ರಮಝಾನಿನಲ್ಲಿ ಇತಿಕಾಫ್ ಸಹ ಮಾಡಿದರು. ಇವರ ಒಬ್ಬ ಸಹೋದರರಾದ ಫಾರೂಖ್ ಅಹ್ಮದ್ ಸಾಹಿಬರು ಒಂದು ರಸ್ತೆ ಅಪಘಾತದಲ್ಲಿ ಮುಂಚೆಯೇ ಸಾವನ್ನಪ್ಪಿದ್ದರು. ಮತ್ತೊಬ್ಬ ಸಹೋದರನ ಸ್ಟೋರ್ ಸಹ ಇವರ ಅಂಗಡಿ ಸಮೀಪವೇ ಇದೆ. ಅವರಿಗೂ ಅಪಾಯದ ಸಾಧ್ಯತೆಯಿದೆ. ಬೆದರಿಕೆಗಳನ್ನು ವಿರೋಧಿಗಳು ಒಡ್ಡುತ್ತಿದ್ದಾರೆ. ಶಹೀದ್ ಮರ್‌ಹೂಮ್ ತನ್ನ ಪತ್ನಿಯಾದ ರಶೀದ ಮೀರಾಜ್ ಸಾಹಿಬ, ಮೂರು ಗಂಡು ಮಕ್ಕಳಾದ ಯಾಸಿರ್ 27ವರ್ಷ, ಮುಸವ್ವಿರ್ 25ವರ್ಷ, ಜಾಝಿಬ್ 14ವರ್ಷ ಮತ್ತು ಒಬ್ಬಳು ಮಗಳಾದ ಆಯಿಶಾರನ್ನು ಅಗಲಿರುವರು. ಆಯಿಶಾ ಎಂ.ಬಿ.ಬಿ.ಎಸ್ಸಿನ ವಿದ್ಯಾರ್ಥಿನಿಯಾಗಿರುವಳು, ಜಾಝಿಬ್ ಸಹ ತಮ್ಮ ಸ್ಕೂಲಲ್ಲಿ ತುಂಬ ವಿರೋಧವನ್ನು ಎದುರಿಸುತ್ತಿದ್ದಾನೆ. ಅಲ್ಲಾಹನು ಆ ಮಕ್ಕಳನ್ನು ಸಹ ಕಿಡಿಗೇಡಿಗಳ ಉಪದ್ರಗಳಿಂದ ಸುರಕ್ಷಿತಗೊಳಿಸಲಿ. ಈಗ ಪಾಕಿಸ್ತಾನದಲ್ಲಿ ಅಹ್ಮದಿಯ್ಯತಿನ ವಿರೋಧ ಪುನಃ ಶಕ್ತವಾಗಿ ಆಗುತ್ತಿದೆ. ಮಾತ್ರವಲ್ಲ ಅಸೆಂಬ್ಲಿಯ ಮೆಂಬರರು ಕೂಡ ಸುಳ್ಳು ಅಪವಾದಗಳನ್ನು ನಮ್ಮ ಮೇಲೆ ಹೊರಿಸಿ ಜನಸಾಮಾನ್ಯರನ್ನು ರುಚ್ಚಿಗೆಬ್ಬಿಸಲು ಪ್ರಯತ್ನ ಮಾಡುತ್ತಿದ್ದಾರೆ. ಜಮಾಅತಿಗೆ ಯಾವುದೇ ಸಂಬಂಧವಿಲ್ಲದ ತಪ್ಪಾದ ಕುಕೃತ್ಯಗಳನ್ನು ತಪ್ಪಾಗಿ ನಮ್ಮ ಹೆಸರಲ್ಲಿ ತೋರಿಸುತ್ತಾರೆ ಹಾಗೂ ಈ ಕೃತ್ಯಗಳನ್ನು ಮಾಡಿದವರು ಅಹ್ಮದಿಯರು ಎಂದು ಅಪಪ್ರಚಾರ ಮಾಡುತ್ತಾರೆ. ಕುಕೃತ್ಯ ಮಾಡಿದವರಿಗೆ ಜಮಾಅತಿನೊಂದಿಗೆ ಯಾವುದೇ ಸಂಬಂಧವಿರುವುದಿಲ್ಲ. ಅದೇ ರೀತಿಯಲ್ಲಿ ಕಳಪೆ ಪ್ರಸಿದ್ಧಿಗಾಗಿ ಪ್ರತಿಯೊಬ್ಬ ಅಯೋಗ್ಯ ವ್ಯಕ್ತಿ ಯೂಟ್ಯೂಬ್‌ನಲ್ಲಿ ಜಮಾಅತಿನ ವಿರುದ್ಧ ತಮ್ಮ ಪ್ರೋಗ್ರಾಮ್ ಮಾಡಿ ತಪ್ಪಾದ ಸಂಗತಿಗಳನ್ನು ನಮ್ಮ ಮೇಲೆ ಹೊರಿಸಿ ಮಹತ್ತಾದ ಪುಣ್ಯ ಕಾರ್ಯವನ್ನು ಮಾಡಿತ್ತಿರುವೆನು ಎಂದು ಭಾವಿಸುತ್ತಾನೆ. ಯಾವುದೇ ಸದುದ್ದೇಶವಿರುವುದಿಲ್ಲ, ಬದಲಿಗೆ ಕೇವಲ ಕೀಳುಮಟ್ಟದ ಖ್ಯಾತಿಯನ್ನು ಇಚ್ಛಿಸುತ್ತಾರೆ. ಅಲ್ಲಾಹನು ಈ ದುಷ್ಟರ ಉಪದ್ರವಗಳು ಅವರಿಗೆಯೇ ತಿರುಗೇಟನ್ನಾಗಿ ಮಾಡಲಿ. ಈ ದಿನಗಳಲ್ಲಿ ವಿಶೇಷವಾಗಿ ಪಾಕಿಸ್ತಾನದ ಜಮಾಅತ್ ಮತ್ತು ಲೋಕದ ಎಲ್ಲರು ಬಹಳ ಹೆಚ್ಚಾಗಿ ದುಆ ಮಾಡುತ್ತಿರಬೇಕು. **ರಬ್ಬಿ ಕುಲ್ಲಿ ಶೈಇನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ – ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನಹೂರಿಹಿಮ್ ವನಊಝುಬಿಕ ಮಿನ್ ಶುರೂರಿಹಿಮ್** ಎಂಬ ಪ್ರಾರ್ಥನೆಗಳನ್ನು ತುಂಬಾ ಮಾಡುತ್ತಿರಬೇಕು. ಸ್ವಲಾತ್ ಪ್ರಾರ್ಥನೆಯನ್ನೂ ತುಂಬಾ ಮಾಡುತ್ತಿರಬೇಕು. ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯನ್ನು ಈ ಕಿಡಿಗೇಡಿಗಳ ಕುಚೇಷ್ಟೆಗಳಿಂದ ಸಂರಕ್ಷಿಸಲಿ. ಈ ಶತ್ರುತ್ವ ವರ್ಧಿಸುವಷ್ಟು ನಾವು ಅಲ್ಲಾಹನ ಮುಂದೆ ಬಾಗುವುದನ್ನು ಸಹ ವರ್ಧಿಸಬೇಕು.

ಶಹೀದಿನ ಮಗನಾದ ಯಾಸಿರ್ ಸಾಹಿಬರು ಹೇಳುತ್ತಾರೆ: ನನ್ನ ತಂದೆ ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಚಂದಾ ನೀಡುವುದರಲ್ಲಿ ಯಾವಾಗಲೂ ನಿಷ್ಠೆಯಿಂದ ಭಾಗವಹಿಸಲು ಮುಂದಿರುತ್ತಿದ್ದರು. ಅದಲ್ಲದೆ, ಜನರ ಬಗ್ಗೆ ಯಾವಾಗಲೂ ಚಿಂತೆ ಮಾಡುತ್ತಿದ್ದರು ಮತ್ತು ಅವರಿಗೆ ಧನಸಹಾಯ ಮಾಡುತ್ತಿದ್ದರು. ನನ್ನ ತಂದೆ ಬಹಳ ಧೈರ್ಯಶಾಲಿ ಮತ್ತು ಧೀರ ವ್ಯಕ್ತಿಯಾಗಿದ್ದರು. ವಿರೋಧವಿದ್ದರೂ ಯಾವಾಗಲೂ ನಿರ್ಭೀತರಾಗಿ ಇರುತ್ತಿದ್ದರು. ಅಲ್ಲಾಹನ ಮೇಲೆ ಭರವಸೆಯಿಟ್ಟಿದ್ದರು. ನನಗೆ ಯಾವುದೇ ವಿರೋಧದ ಪರಿವೆಯಿಲ್ಲ, ನನ್ನ ಅಲ್ಲಾಹನು ನನ್ನೊಂದಿಗೆ ಇದ್ದಾನೆ ಎಂದು ಯಾವಾಗಲೂ ಹೇಳುತ್ತಿದ್ದರು. ಅತ್ಯಂತ ಸರಳ ಸ್ವಭಾವಿಯೂ, ವಿನೀತರೂ ಉದಾರಿಯೂ ಆದ ವ್ಯಕ್ತಿಯಾಗಿದ್ದರು. ಯಾವಾಗಲೂ ಜನರನ್ನು ವಿಶಾಲ ಮನಸ್ಸಿನೊಂದಿಗೆ ಸಹಾಯ ಮಾಡುತ್ತಿದ್ದರು. ದೇವಭಯವುಳ್ಳವರೂ, ದೇವಸ್ಮರಣೆಯಲ್ಲಿ ನಿರತರೂ ಅಲ್ಲಾಹನೊಡನೆ ತುಂಬ ದೃಢವಾದ ಸಂಬಂಧ ಮತ್ತು ಭರವಸೆ ಹೊಂದಿದವರೂ ಆಗಿದ್ದರು. ನಮಾಝನ್ನು ನಿಯತವಾಗಿ ನಿರ್ವಹಿಸುವವರೂ ತಹಜ್ಜುದ್ ಅನುಷ್ಠಿಸುವವರೂ ಆಗಿದ್ದರು. ಬೆಳಿಗ್ಗೆ ರಾತ್ರಿ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು. ಹಾಗೆ ಮಾಡಲು ಮಕ್ಕಳಿಗೂ ತಾಕೀತು ಮಾಡುತ್ತಿದ್ದರು. ಈ ಬಾರಿ ರಮಝಾನಿನಲ್ಲಿ ಇತಿಖಾಫ್‌ಗಾಗಿ ಸಹ ಕುಳಿತ್ತಿದ್ದರು. ನನ್ನ ತಂದೆಯವರು ಹೇಳುತ್ತಿದ್ದರು: ನಾನು ಕನಸಿನಲ್ಲಿ ಕುಕರ್ಮಿಗಳ ಮತ್ತು ಕಪಟವಿಶ್ವಾಸಿಗಳ ಕೆಟ್ಟ ಪರಿಣಾಮವನ್ನು

ಕಂಡಿರುವೆನು. ನಮಗಾಗಿ ಅಲ್ಲಾಹನು ಹಲವು ಸಂಗತಿಗಳನ್ನು ಶೇಖರಿಸಿ ಇಟ್ಟಿರುವನು ಎಂದು ಬಹಳ ಸಮಾಧಾನದಿಂದ ಹೇಳುತ್ತಿದ್ದರು.

ಆಸ್ಟ್ರೇಲಿಯಾದ ಅಮೀರ್ ಸಾಹಿಬರೂ ಮತ್ತು ಅಲ್ಲಿಯ ಸದಸ್ಯರೂ ಸಹ ಪತ್ರಗಳಲ್ಲಿ ಅವರ ಬಗ್ಗೆ ಹೀಗೆ ಬರೆದಿರುವರು: ಅವರು ಆಸ್ಟ್ರೇಲಿಯದಲ್ಲಿ ಇದ್ದಷ್ಟು ಕಾಲ ಬಹಳ ಅರ್ಪಣ ಭಾವದ ಮೆಂಬರಾಗಿ ನಾವು ಅವರನ್ನು ಕಂಡಿರುವೆವು. ಜಮಾಅತಿನ ಸನ್ನದ್ಧ ಕಾರ್ಯಕರ್ತರಾಗಿದ್ದರು. ಎಲ್ಲರನ್ನೂ ಪ್ರೀತಿಸುವವರೂ ಅತಿಥಿ ಸತ್ಕಾರ ಮಾಡುವವರೂ ವಿನೀತರೂ ಆಗಿದ್ದರು. ಬಹಳ ಧೀರ ಮತ್ತು ಆವೇಶಹೊಂದಿದ್ದ ಅಹ್ಮದಿಯಾಗಿದ್ದರು. ಸ್ವಲ್ಪವೇ ಮಾತಾಡುವವರೂ ಸೌಮ್ಯವಾಗಿ ಮಾತುಕತೆ ನಡೆಸುವವರೂ ಆಗಿದ್ದರು. ಅವರು ಆಸ್ಟ್ರೇಲಿಯದಿಂದ ಮರಳಿ ಹೋಗಲು ತೀರ್ಮಾನಿಸಿದಾಗ ಅವರ ಸ್ನೇಹಿತರು ಮತ್ತು ಮಕ್ಕಳು ಪಾಕಿಸ್ತಾನದ ಅಪಾಯಕಾರಿ ಸ್ಥಿತಿಗತಿಗಳ ಕಾರಣ ಹೋಗುವುದರಿಂದ ತಡೆದಿದ್ದರು. ಆದರೆ ಇವರು ಹೀಗೆ ಹೇಳುತ್ತಿದ್ದರು: ಜಮಾಅತಿನ ಮಾರ್ಗದಲ್ಲಿ ಜೀವಹೋದರೆ ಅದಕ್ಕಿಂತ ಮಹತ್ತಾದ ಸೌಭಾಗ್ಯ ಬೇರೇನಿದೆ. ಇದು ಗೌರವದ ಸಂಗತಿಯಾಗಿದೆ. ಹೀಗೆ ಹೇಳಿ ಅವರು ವಾಪಾಸ್ಸು ಹೋದರು. ಝಈಮ್ ಅನ್ಸಾರುಲ್ಲಾಹ್ ಮೆಲ್ಬರ್ನ್ ಹೇಳುತ್ತಾರೆ: ಶಹಾದತಿನ ಕೆಲವು ದಿನಗಳ ಹಿಂದೆ ನನಗೆ ಅವರ ಫೋನ್ ಬಂದಿತ್ತು. ವಿರೋಧ ಬಹಳ ಹೆಚ್ಚಾಗಿದೆ, ಆದರೆ ನಾನು ಹೆದರುವವನಲ್ಲ ಎಂದು ಅವರು ಹೇಳಿದ್ದರು.

ಎರಡನೇ ಜನಾಝ ಅದೀಬ್ ಅಹ್ಮದ್ ನಾಸಿರ್ ಮುಬಲ್ಲಿಗ್ ಜಮಾಅತ್‌ರವರದ್ದಾಗಿದೆ. ಅವರು ಮುಹಮ್ಮದ್ ನಾಸಿರ್ ಅಹ್ಮದ್ ಡೋಗರ್ ಸಾಹಿಬ್ ಏದಿಪುರ್ ನಾರೋವಾಲ್‌ರ ಮಗನಾಗಿದ್ದರು. ಆಗಸ್ಟ್ 9ರಂದು 27ನೇ ವಯಸ್ಸಿನಲ್ಲಿ ಸ್ವಲ್ಪಕಾಲದ ರೋಗವಸ್ಥೆಯ ನಂತರ ವಫಾತಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಜಾಮಿಅದಲ್ಲಿ ಪ್ರವೇಶಿಸಿ ಜುಲೈ 2017ರಲ್ಲಿ ಜಾಮಿಅದ ಶಿಕ್ಷಣ ಪೂರ್ತಿ ಮಾಡಿದ್ದರು. ಕರ್ಮ ಮೈದಾನಕ್ಕೆ ಬಂದು ಲೋಕಲ್ ಇಸ್ಲಾಹೋ ಇರ್‌ಶಾದ್ ಅಡಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ವಿವಾಹದ ನಿಶ್ಚಯ ಸಹ ನಡೆದಿತ್ತು. ಆಗಸ್ಟ್ 9ಗೆ ವಿವಾಹ ನಡೆಯಬೇಕಾಗಿತ್ತು. ಆದರೆ ಅವರಿಗೆ ತೀವ್ರತರದ ಜ್ವರಬಂದು, ಟಾಯ್ಫೈಡ್ ಆಯಿತು. ಅನಂತರ ಟಾಯಿಫೈಡ್ ಜಾಸ್ತಿಯಾಗಿ ಮೆನಂಜೈಟೀಸ್ ಎಂಬ ಮಿದುಳಿನ ಜ್ವರ ಬಂತು. ಜ್ವರವನ್ನು ಲೆಕ್ಕಿಸದೆ ತಮ್ಮ ಕೆಲಸಗಳನ್ನು ಮಾಡುತ್ತಿದ್ದರು. ಯಾತ್ರೆ ಸಹ ಮಾಡುತ್ತಿದ್ದರು. ಹೇಗಿದ್ದರೂ ಮೂರು ನಾಲ್ಕು ದಿನದ ರೋಗಾವಸ್ಥೆಯ ನಂತರ ನಿಧನರಾದರು. ಅವರ ತಂದೆಯಾದ ನಾಸಿರ್ ಡೋಗರ್ ಸಾಹಿಬರು ಹೇಳುತ್ತಾರೆ: ನನ್ನ ಮಗನು ವಖ್‌ಫೆ ಝಿಂದಗಿ ಎಂಬ ನೆಲೆಯಲ್ಲಿ ನಮಗೆ ಹೆಮ್ಮೆಯ ಸಂಗತಿಯಾಗಿತ್ತು. ಬಹಳ ಒಳ್ಳೆಯವನೂ ಸಜ್ಜನನೂ ಆಗಿದ್ದನು. ನಮಾಝ್ ಮತ್ತು ಉಪವಾಸವನ್ನು ನಿಯತವಾಗಿ ಅನುಷ್ಠಿಸುವವನೂ ಸರಳ ಸ್ವಭಾವದವನೂ ಆಗಿದ್ದನು. ಸೌಮ್ಯವಾಗಿ ವರ್ತಿಸುವವನೂ ಸದಾ ಮಂದಹಾಸ ಬೀರುವವನೂ ಆಗಿದ್ದನು. ಮುರಬ್ಬಿಗಳಾದ ಮತ್ತು ಅವನೊಡನೆ ಸಂಪರ್ಕವಿದ್ದ ಅವನ ಗೆಳೆಯರು ಸಹ ಅವನ ಈ ಗುಣವಿಶೇಷತೆಗಳ ಬಗ್ಗೆ ಬರೆದಿದ್ದಾರೆ. ಯಾವಾಗಲೂ ಮುಗುಳ್ನಗುವವನು, ಜಮಾಅತಿನ ಮೇಲೆ ಸ್ನೇಹವಿರುವವನು ಹಾಗೂ ಸೇವೆ ಮಾಡಲು ಆವೇಶವಿರುವವನು ಆಗಿದ್ದನು. ಎಲ್ಲರಿಗೂ ಪ್ರಿಯವಾಗಿದ್ದನು. ಅವರು ಸೇವೆ ಮಾಡುತ್ತಿದ್ದ ಜಮಾಅತಿನಲ್ಲಿಯೂ ಅವರು ಅಲ್ಲಿ ನೇಮಿಸಲ್ಪಡುವ ಮುಂಚೆಯೇ ಬೈತುಝ್ಝಿಕ್ರ್ ಮತ್ತು ಮುರಬ್ಬಿ ಹೌಸ್ ನಿರ್ಮಿಸುವ ಕೆಲಸದಲ್ಲಿ ಬಹಳ ಆವೇಶದಿಂದ ನಿರತರಾಗಿದ್ದರು. ತಮ್ಮ ಅಲ್ಪವಾದ ಸಂಬಳದಿಂದ ಹಣವನ್ನು ಕೂಡಿಟ್ಟು ಮೂವತ್ತು ಸಾವಿರ ರೂಪಾಯಿ ಮಸೀದಿ ನಿರ್ಮಾಣಕ್ಕೆ ಕಳುಹಿಸಿದ್ದರು. ಕೆಲಸವನ್ನು ಶುರುಮಾಡಲು ಪದೇ ಪದೇ ತಾಕೀತು ಮಾಡುತ್ತಿದ್ದರು. ಕೆಲಸವನ್ನು ಶುರುಮಾಡಿರಿ, ಅಲ್ಲಾಹನು ಅದರಲ್ಲಿ ಅನುಗ್ರಹವನ್ನು ವರ್ಷಿಸುವನು ಎಂದು ಯಾವಾಗಲೂ ಹೇಳುತ್ತಿದ್ದರು. ಅವರ ತಾಯಿಯಾದ ನಾಸಿರ ಸಾಹಿಬ ಹೇಳುತ್ತಾರೆ: ನನ್ನ ಮಗನಾದ ಅದೀಬ್ ಅಹ್ಮದಿನ ಜನನದ ದಿನ ನಮಗೆ ಸಂತೋಷದ ದಿನವಾಗಿತ್ತು. ಏಕೆಂದರೆ ನಾವು ಅವನನ್ನು ವಖ್‌ಫ್ ಮಾಡಿದ್ದೆವು. ನಾಲ್ಕು ಹೆಣ್ಮಕ್ಕಳ ನಂತರ ಅಲ್ಲಾಹನು ನಮಗೆ ಗಂಡು ಮಗುವನ್ನು ದಯಪಾಲಿಸಿದಾಗ ನಮ್ಮ ಸಂತೋಷಕ್ಕೆ ಮಿತಿಯಿರಲಿಲ್ಲ. ಇವನು ದೊಡ್ಡವನಾಗಿ ಮುರಬ್ಬಿ ಆಗುವನು ಎಂಬುವುದರಲ್ಲಿ ನಮಗೆ ಸಂತೋಷವಿತ್ತು. ಎರಡನೇ ಖುಶಿಯ ದಿನ ನಮ್ಮನ್ನು ಜಾಮಿಅಗೆ ಕರೆದು ಅವನಗೆ ಶಾಹಿದ್ ಪದವಿಯನ್ನು ಕೊಟ್ಟ ದಿನವಾಗಿತ್ತು. ಅತ್ಯಂತ ಒಳ್ಳೆಯ ಮತ್ತು ಅನುಸರಣೆಯುಳ್ಳ ಮಗನಾಗಿದ್ದನು. ಫೀಲ್ಡ್‌ನಿಂದ ಯಾವಾಗಲೂ ನಮ್ಮ ಯೋಗಕ್ಷೇಮದ ಬಗ್ಗೆ, ಆರೋಗ್ಯದ ಬಗ್ಗೆ, ಮದ್ದಿನ ಬಗ್ಗೆ ಕೇಳುತ್ತಿದ್ದನು. ಆರೋಗ್ಯದ ಕಡೆಗೆ ಗಮನಹರಿಸಲು ಯಾವಾಗಲೂ ಹೇಳುತ್ತಿದ್ದನು. ಬಹಳ ದೇವಭಯವುಳ್ಳವನಾಗಿದ್ದನು. ಜಮೀನುದಾರ ಕುಟುಂಬದವರಾದ ಕಾರಣ, ಗೋದಿಯ ಸೀಸನ್ ಆಗುವಾಗ ಗೋದಿಯನ್ನು ಹೆಚ್ಚು ಶೇಖರಿಸಿಡಲು ತಾಯಿಗೆ ಹೇಳುತ್ತಿದ್ದರು. ನಿರ್ಗತಿಕರು ಬರುತ್ತಾರೆ, ಬಡವರನ್ನು ಸಹಾಯ ಮಾಡಬೇಕಾಗುತ್ತದೆ. ಅವರಿಗೆ ಕೊಡಲಿಕ್ಕಾಗಿ ಹೀಗೆ ಹೇಳುತ್ತಿದ್ದರು.

ಏದಿಪುರ್‌ನ ಸ್ಥಳವಾದ ಚೀನೆ ಎಂಬ ಜಮಾಅತಿನಲ್ಲಿ ಒಂದು ಕೋಣೆಯಲ್ಲಿ ವಾಸಿಸುತ್ತಿದ್ದರು. ಆವಶ್ಯಕ ಸಾಮಾನುಗಳು ಇಲ್ಲದಿದ್ದರೂ ಧೈರ್ಯದಿಂದ ಡ್ಯೂಟಿ ಮಾಡುತ್ತಿದ್ದರು. ಜಿಲ್ಲೆಯ ಮುಬಲ್ಲಿಗ್ ಆದ ಜಾವೇದ್ ಸಾಹಿಬರು ಬರೆಯುತ್ತಾರೆ: ಫೈಸಲಾಬಾದಿನ ದಿವಂಗತ ಮುರಬ್ಬಿ ವಖ್‌ಫಿನ ಯಥಾರ್ಥ ಅರ್ಥವನ್ನು ಅರಿತು ಜೀವನ ಸಾಗಿಸುವವರಾಗಿದ್ದರು. ಬಹಳ ಪರಿಶ್ರಮದಿಂದ ಕೆಲಸ ಮಾಡುತ್ತಿದ್ದರು. ಉತ್ತಮ ತರಬೇತಿ ಮಾಡುತ್ತಾ ಹುದ್ದೇದಾರರೊಡನೆ ಎಲ್ಲ ರೀತಿಯಲ್ಲಿ ಸಹಕರಿಸುತ್ತಿದ್ದರು. ಖಲೀಫರ ಕ್ಲಿಪ್ಸ್‌ಗಳನ್ನು ವಿಶೇಷವಾಗಿ ಜಮಾಅತಿನ ಸಹೋದರರಿಗೆ ತೋರಿಸುತ್ತಿದ್ದರು. ಯಾರಲ್ಲಾದರೂ ಏನಾದರೂ ನ್ಯೂನತೆಗಳು ಕಂಡರೆ, ಅವರ ಸ್ವಾಭಿಮಾನವನ್ನು ಪರಿಗಣಿಸಿ ಅವರನ್ನು ಒಬ್ಬಂಟಿಯಾಗಿ ಕಾಣುವಾಗ ತಿಳಿಹೇಳುತ್ತಿದ್ದರು. ಎಲ್ಲರ ನೆರವಿಗೂ ಬರುತ್ತಿದ್ದರು. ಖಿಲಾಫತಿನೊಂದಿಗೆ ಪ್ರೀತಿ, ಜಮಾಅತಿನ ವ್ಯವಸ್ಥೆಯ ಅನುಸರಣೆ, ಸ್ನೇಹಭಾವ, ಸುಸ್ವಭಾವ, ಸೌಮ್ಯತೆ, ವಿನಯ ಇವುಗಳು ಅವರ ವಿಶಿಷ್ಟ ಸ್ವಭಾವ ಗುಣಗಳಾಗಿದ್ದುವು. ತುಂಬ ಮರ್ಯಾದಸ್ತನೂ ಅಲ್ಲಾಹನ ಸಂಪ್ರೀತಿಯಲ್ಲಿ ಸಂತೃಪ್ತನೂ ಆಗಿದ್ದರು. ಅಲ್ಲಾಹನು ಅವರ ತಂದೆತಾಯಂದಿರಿಗೆ ಸಮಾಧಾನ ಮತ್ತು ಸಹನೆ ನೀಡಲಿ. ದುಃಖವನ್ನು ಸಹಿಸಲು ಶಕ್ತಿ ನೀಡಲಿ. ಸಹೋದರಿಯರಿಗೂ ಧೈರ್ಯಕೊಡಲಿ. ಅಲ್ಲಾಹನು ದಿವಂಗತನೊಂದಿಗೆ ಕಾರುಣ್ಯ ಮತ್ತು ಮಗ್‌ಫಿರತ್‌ನಿಂದ ವರ್ತಿಸಲಿ. ಅವನ ಪದವಿಗಳನ್ನು ಉನ್ನತಗೊಳಿಸಲಿ.

ನಾನು ಪ್ರಸ್ತಾಪಿಸಲಿರುವ ಮುಂದಿನ ಜನಾಝ ಸನ್ಮಾನ್ಯ ಹಮೀದ್ ಅಹ್ಮದ್ ಶೇಖ್ ಸಾಹಿಬರದ್ದಾಗಿದೆ. ಅವರು ಶೇಖ್ ಮುಹಮ್ಮದ್ ಹುಸೈನ್ ಸಾಹಿಬರ ಮಗನಾಗಿದ್ದರು. ಆಗಸ್ಟ್ 12ರಂದು ಹೃದಯಾಘಾತದಿಂದ 85ನೇ ವಯಸ್ಸಿನಲ್ಲಿ ವಫಾತ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾದ ಹಝ್ರತ್ ಶೇಖ್ ನೂರ್ ಅಹ್ಮದ್ ಸಾಹಿಬರ ಮೊಮ್ಮಗರಾಗಿದ್ದರು. ಇವರ ತಂದೆಯಾದ ಸನ್ಮಾನ್ಯ ಶೇಖ್ ಮುಹಮ್ಮದ್ ಹುಸೈನ್ ಸಾಹಿಬರು ಚಿನಿಯೋಟ್ ಜಮಾಅತಿನಲ್ಲಿ ಅಮೀರ್ ಆಗಿ ಸೇವೆ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. ಶೇಖ್ ನೂರ್ ಅಹ್ಮದ್ ಸಾಹಿಬರು ಬೈಅತ್ ಮಾಡಿದ ನಂತರ, ತಮ್ಮ ಎರಡೂ ಮಕ್ಕಳನ್ನು ಖಾದಿಯಾನಿಗೆ ಕಳುಹಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವರನ್ನು ನಿರ್ದೇಸಿದ್ದರು. ಹೀಗೆ ಸನ್ಮಾನ್ಯ ಹಮೀದ್ ಅಹ್ಮದ್ ಶೇಖ್ ಸಾಹಿಬರ ತಂದೆಯಾದ ಶೇಖ್ ಮುಹಮ್ಮದ್ ಹುಸೈನ್ ಸಾಹಿಬರು ಖಾದಿಯಾನಿನಿಂದ ಮೆಟ್ರಿಕುಲೇಶನ್ ಪೂರ್ತಿ ಮಾಡಿದರು. ಅವರು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರ ಸಹಪಾಠಿಯಾಗುವ ಸೌಭಾಗ್ಯವನ್ನು ಸಹ ಪಡೆದಿದ್ದರು. ಹಮೀದ್ ಅಹ್ಮದ್ ಶೇಖ್ ಸಾಹಿಬರ ಅಜ್ಜ, ಎಂದರೆ ತಾಯಿಯ ತಂದೆಯಾದ ಹಝ್ರತ್ ಮೌಲವಿ ಅಬ್ದುಲ್ ಖಾದಿರ್ ಸಾಹಿಬ್ ಲುಧಿಯಾನವಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ 313 ವಿಶಿಷ್ಟ ಸಹಾಬಿಯರಲ್ಲಿ ಸೇರಿದ್ದರು. ಹಮೀದ್ ಅಹ್ಮದ್ ಸಾಹಿಬರ ವಿವಾಹ ಕಪೂರ್‌ಥಲದ ಹಝ್ರತ್ ಮುನ್ಷಿ ಝಫರ್ ಅಹ್ಮದ್ ಸಾಹಿಬರ ಮೊಮ್ಮಗಳೊಂದಿಗೆ ನಡೆದಿತ್ತು. ಸನ್ಮಾನ್ಯ ಹಮೀದ್ ಅಹ್ಮದ್ ಶೇಖ್ ಸಾಹಿಬರು ಚಾರ್ಟರ್ಡ್ ಆರ್ಕಿಟೆಕ್ಟ್ ಆಗಿದ್ದರು. ತಮ್ಮ ಶಿಕ್ಷಣವನ್ನು 1973ರಲ್ಲಿ ಲಂಡನನಲ್ಲಿ ಪೂರ್ತಿ ಮಾಡಿದ್ದರು. ರೋಟಿ ಪ್ಲಾಂಟಿನ ಇಂಚಾರ್ಜ್ ಆದ ರಶೀದ್ ಅಹ್ಮದ್ ವಿಂಬಲ್ಡನ್ ಸಾಹಿಬರು ಇವರ ಸಹೋದರರಾಗಿದ್ದಾರೆ. ದಿವಂಗತರು ಇಬ್ಬರು ಗಂಡು ಮಕ್ಕಳನ್ನು ಮತ್ತು ಒಬ್ಬಳು ಹೆಣ್ಣುಮಗಳನ್ನು ಅಗಲಿರುವರು. ದಿವಂಗತರ ಒಬ್ಬ ಮಗನಾದ ಅಬ್ದುರ್ರಜ್ಜಾಖ್ ಶೇಖ್ ಸಾಹಿಬರು ನಮ್ಮ ಆರ್ಕಿಟೆಕ್ಟ್ ಅಸೋಸಿಯೇಶನ್ ಆದ IAAAEಯ ವೈಸ್ ಚೇರ್‌ಮೇನ್ ಸಹ ಆಗಿರುವರು. ಅಬ್ದುರ್ರಜ್ಜಾಖ್ ಶೇಖ್ ಸಾಹಿಬರು ಬರೆಯುತ್ತಾರೆ: ನನ್ನ ತಂದೆ ಒಬ್ಬ ಪ್ರೀತಿಯ ಅಪ್ಪ ಮತ್ತು ನಿಷ್ಠಾವಂತ ಮಗನೂ, ಗಂಡನೂ ಮತ್ತು ತಾತರೂ ಆಗಿದ್ದರು. ಕುಟುಂಬದ ಎಲ್ಲ ಸದಸ್ಯರನ್ನೂ ಪ್ರೀತಿಸುತ್ತಿದ್ದರು. ಅವರು ಅಹ್ಮದಿಯಾ ಜಮಾಅತಿನ ಸಜ್ಜನ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. ಯಾವುದೇ ರೀತಿಯಲ್ಲೂ ಎಂದಿಗೂ ಜಮಾಅತಿನ ಸೇವೆಯ ಅವಕಾಶವನ್ನು ಕಳೆಯುತ್ತಿರಲಿಲ್ಲ. ಖಲೀಫತುಲ್ ಮಸೀಹಿಗೆ ಸದಾ ಪತ್ರಗಳನ್ನು ಬರೆಯುತ್ತಿದ್ದರು ಮತ್ತು ಖಲೀಫತುಲ್ ಮಸೀಹರಿಗೆ ಪತ್ರ ಬರೆಯಲು ಮಕ್ಕಳನ್ನು ಸಹ ತಾಕೀತು ಮಾಡುತ್ತಿದ್ದರು. ಎಲ್ಲ ಸ್ಥಳದಲ್ಲೂ ಪ್ರಾದೇಶಿಕ ಜಮಾಅತಿನೊಂದಿಗೆ ಸಂಬಂಧವಿರಿಸಲು ಮಕ್ಕಳಿಗೆ ಪದೇ ಪದೇ ತಾಕೀತು ಮಾಡುತ್ತಿದ್ದರು. ಜಮಾಅತಾದ ನಮಾಝ್ ನಿಯತವಾಗಿ ನಿರ್ವಹಿಸುತ್ತಿದ್ದರು. ಮಕ್ಕಳಿಗೂ ಅದರ ಬಗ್ಗೆ ಗಮನಹರಿಸುತ್ತಿದ್ದರು. ಜಮಾಅತಿನ ಸಾಂಪತ್ತಿಕ ಯೋಜನೆಗಳಲ್ಲಿ ಆವೇಶದಿಂದ ಭಾಗವಹಿಸುತ್ತಿದ್ದರು. ಬಹಳ ಶ್ರದ್ಧೆಯಿಂದ ವಫಾತಿಗೆ ಮುಂಚಿತವಾಗಿ ತಮ್ಮ ಎಲ್ಲ ಚಂದಾಗಳನ್ನು ಪಾವತಿ

ಮಾಡಿದ್ದಾಗಿ ಖಚಿತಪಡಿಸಿದ್ದರು. ನೈಜೀರಿಯಾದಲ್ಲೂ ಇವರು ಇದ್ದರು. ಅಲ್ಲೂ ಮಸೀದಿಗಳು ಮತ್ತು ಮಿಶನ್ ಹೌಸಿನ ಸ್ಥಳಗಳಲ್ಲಿಯೂ ತಾನು ನಿಪುಣರಾಗಿದ್ದ ಅಲಂಕಾರದ ಕೆಲಸದಲ್ಲಿ ಸಹಾಯ ಮಾಡಿದ್ದರು. ನೈಜೀರಿಯಾದಿಂದ ಮರಳಿ ಬರುವಾಗ ತಮ್ಮ ವಾಹನವನ್ನು ಅಲ್ಲಿಯ ಜಮಾಅತಿಗೆ ಕೊಡುಗೆಯಾಗಿ ಕೊಟ್ಟು ಬಂದಿದ್ದರು. ಪಾಕಿಸ್ತಾನದಲ್ಲೂ, ಇಸ್ಲಾಮಾಬಾದಿನ IAAAEಯ ಚೇರ್‌ಮೇನ್ ಎಂಬ ನೆಲೆಯಲಿ ಸೇವೆ ಮಾಡುತ್ತಿದ್ದರು. ಹೇಗಿದ್ದರೂ ವಿವಿಧ ನೆಲೆಯಲ್ಲಿ ಅವರಿಗೆ ಸೇವೆ ಮಾಡಲು ಸೌಭಾಗ್ಯ ಲಭಿಸಿತ್ತು. ಅಲ್ಲಾಹನು ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಗೊಳಿಸಲು ಸೌಭಾಗ್ಯ ನೀಡಲಿ. ದಿವಂಗತರೊಂದಿಗೆ ಅಲ್ಲಾಹನು ಕಾರುಣ್ಯ ಮತ್ತು ಮಗ್‌ಫಿರತ್‌ನಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಜುಮಾ ನಮಾಝ಼್ ನಂತರ ನಾನು ಈ ಮೂವರ ಜನಾಝ಼ ಗ಼ಾಇಬ್ ನಮಾಝ಼್ ನಿರ್ವಹಿಸುವೆನು.

*****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ನಾವು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನ ವಿಧೇಯರಾಗಿರಬೇಕು. ಅಲ್ಲಾಹನ ಆಜ್ಞೆಪಾಲನೆಯಲ್ಲಿ ತನ್ನ ಜೀವನ ಕಳೆಯಬೇಕು ಎಂದು ಮರಣ ಸಂಭವಿಸಿದರೂ ವಿಧೇಯತೆಯ ಸ್ಥಿತಿ ಇರಬೇಕು. ಎರಡನೆಯದಾಗಿ ಅಲ್ಲಾಹನೊಂದಿಗೆ ಎಂತಹ ಸಂಬಂಧ ಬೆಳೆಸಬೇಕೆಂದರೆ ಅವನು ನಿಮ್ಮ ನಾಶ ಸಹಿಸಕೊಡದು ಮತ್ತು ನೀವು ಪರಿಪೂರ್ಣ ಸತ್ಯವಿಶ್ವಾಸಿಯಾದ ಸ್ಥಿತಿಯಲ್ಲಿ ಹಾಗೂ ಅವನ ಸಂಪ್ರೀತಿ ಹೊಂದಿದ ಸ್ಥಿತಿಯಲ್ಲಿ ನಿಮಗೆ ಮೃತ್ಯು ನೀಡುವಂತಾಗಬೇಕು.

ಪವಿತ್ರ ಖುರ್‌ಆನಿನಿಂದ ತಿಳಿದು ಬರುವುದೇನೆಂದರೆ ಮನುಷ್ಯನ ಮೇಲೆ ಏರಿಳಿತದ ಸ್ಥಿತಿ ಬರುತ್ತಿರುತ್ತದೆ. ಒಮ್ಮೊಮ್ಮೆ ಮನುಷ್ಯನು ಅಲ್ಲಾಹನ ಪ್ರೀತಿಯಲ್ಲಿ ಎಷ್ಟೊಂದು ಮೋಹಿತನಾಗಿರುತ್ತಾನೆ ಎಂದರೆ ಅವನು ಅಲ್ಲಾಹನನ್ನು ಮರೆತುಬಿಡುತ್ತಾನೆ.

ಅಂದಹಾಗೆ ಒಂದು ಹದೀಸಿನಲ್ಲಿ ಬರುತ್ತದೆ ಒಬ್ಬ ವ್ಯಕ್ತಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮುಂದೆ ಹಾಜರಾಗಿ ಹೇಳುತ್ತಾನೆ: ಪ್ರವಾದಿ ವರ್ಯರೇ!! ನಾನು ಕಪಟವಿಶ್ವಾಸಿಯಾಗಿಬಿಟ್ಟೆ ಆಗ ರಸೂಲುಲ್ಲಾಹ್(ಸ) ಪ್ರಶ್ನಿಸಿದರು, ಅದು ಹೇಗೆ? ಅದಕ್ಕೆ ಆತನು ಉತ್ತರಿಸಿದನು ನಾನು ನಿಮ್ಮಲ್ಲಿಗೆ ಬಂದಾಗ ಒಂದು ಸ್ಥಿತಿ ಇರುತ್ತದೆ ಮತ್ತು ನಾನು ಮನೆಗೆ ಹೋದಾಗ ಇನ್ನೊಂದು ಸ್ಥಿತಿಯಾಗಿಬಿಡುತ್ತದೆ. ರಸೂಲುಲ್ಲಾಹ್(ಸ) ಹೇಳಿದರು: ಇದೇನೂ ಗಾಬರಿಗೊಳ್ಳುವ ವಿಷಯವಲ್ಲ ಎಲ್ಲ ಸಮಯಕ್ಕೆ ಒಂದೇ ಸ್ಥಿತಿ ಇದ್ದರೆ ಮನುಷ್ಯನು ಸತ್ತೆ ಹೋಗುತ್ತಿದ್ದನು. ವಾಸ್ತವದಲ್ಲಿ ಹಿತ-ಅಹಿತದ್ದು ಸಹ ವಿಭಿನ್ನ ಸ್ಥಾನಗಳಿರುತ್ತವೆ. ಪರಿಪೂರ್ಣ ಸತ್ಯವಿಶ್ವಾಸಿಯ ಅಹಿತಕರ ಸ್ಥಿತಿಯು ಕೆಳದರ್ಜೆಯವನ ಹಿತಸ್ಥಿತಿಯಂತಿರುತ್ತದೆ. ಅದೇ ರೀತಿ ಪ್ರವಾದಿಗಳ ಮೇಲೂ ಉತ್ಸಾಹ ನಿರುತ್ಸಾಹದ ಕಾಲ ಬರುತ್ತಿರುತ್ತದೆ. ಆದರೆ ಪ್ರವಾದಿಗಳ ನಿರುತ್ಸಾಹ ಸಿದ್ದೀಖರ ಉತ್ಸಾಹ ಸಮಾನವಾಗಿರುತ್ತದೆ. ಅದೇ ಕಾರಣದಿಂದ ಸಜ್ಜನರ ನುಡಿ ಇದೆ- ಹಸನಾತುಲ್ ಅಬ್ರಾರೆ, ಸಯ್ಯಿಅತುಲ್ ಮುಖರ್ರಬೀನ್ ಅಂದರೆ ಸತ್ಕರ್ಮಿಗಳ ಪುಣ್ಯವೂ ದೇವಮಾನರಿಗೆ ಪಾಪದಂತೆ ಪರಿಗಣಿತವಾಗುತ್ತವೆ. ಅದರ ಅರ್ಥ ಇದೇ ಆಗಿದೆ. ಮಧ್ಯಸ್ತ ಜನರು ಯಾವುದನ್ನು ಪುಣ್ಯ ಎಂದು ಭಾವಿಸುತ್ತಾರೆ ಅದನ್ನು ಉನ್ನತ ದರ್ಜೆ ಹೊಂದಿದ ಜನರು ಪಾಪ ಎಂದು ಭಾವಿಸುತ್ತಾರೆ. ಮಧ್ಯಸ್ತರ ಪಾಪಗಳು ಕೆಳದರ್ಜೆಯವರಿಗೆ ಪುಣ್ಯಗಳಂತೆ ಭಾಸವಾಗುತ್ತವೆ. ಆದುದರಿಂದ ಈ ಎರಡು ಸ್ಥಿತಿಗಳು ಮನುಷ್ಯನ ಮೇಲೆ ಬರುತ್ತಿರುತ್ತವೆ. ಮರಣದ ಸಮಯ ಯಾರು ತಿಳಿದಿರುವುದಿಲ್ಲ. ಆದುದರಿಂದ ಹೇಳಲಾಗುತ್ತದೆ- ನೀವು ಅಲ್ಲಾಹನೊಂದಿಗೆ ಎಂತಹ ಸಂಬಂಧ ಬೆಳೆಸಬೇಕೆಂದರೆ ಉತ್ತಮವಾದ ಸಮಯದಲ್ಲಿ ನಮಗೆ ಅಗಲಿಕೆಯ ಸಮಯ ಬರಬೇಕು ಮತ್ತು ಅಲ್ಲಾಹನ ದೂತನು (ಮಲಕುಲ್ ಮೌತ್) ಎಂತಹ ಸಮಯಕ್ಕೆ ನಿಮ್ಮ ಜೀವ ತೆಗೆಯುವಂತಾಗಬೇಕೆಂದರೆ ಆಗ ಅಲ್ಲಾಹನೊಂದಿಗೆ ನಿಮ್ಮ ಸಂಬಂಧ ಒಳ್ಳೆ ಸತ್ಯವಂತನೂ ಹಾಗೂ ನಿಷ್ಠವಂತನ ರೀತಿಯದ್ದಾಗಿರಬೇಕು.

**(ತಫ್ಸೀರೆ ಕಬೀರ್, ಸಂಪುಟ-2, ಪುಟ-202-203, ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ವಿಧಿಸಿದರೂ ಸರಿಯೇ (ಆಸ್ಮಾನಿ ಫೈಸ್ಲ, ರೂಹಾನಿ ಖಝಾಯಿನ್ ಸಂಪುಟ 4, ಪುಟ 339)

**ಸರ್ ಸಯ್ಯದ್ ಅಹ್ಮದ್ ಖಾನ್ ಅಲಿಗಢ್ ವಿಶ್ವವಿದ್ಯಾಲಯ ಸ್ಥಾಪಕರು, ಅವರಿಗೆ ದೃಷ್ಟಾಂತ ತೋರಿಸಲು ಆಹ್ವಾನ ನೀಡುತ್ತಾ ಹೇಳಿದರು.**

"ನೀವು ಸತ್ಯವಂತರಾಗಿ ನನ್ನ ಕಡೆ ಗಮನಹರಿಸಿದರೆ ನಾನು ಅಲ್ಲಾಹನ ಅನುಗ್ರಹ ಪಡೆದು ಈ ವಚನ ನೀಡುತ್ತೇನೆ. ನಿಮನ್ನು ತೃಪ್ತಿಗೊಳಿಸಲು ಆ ಸರ್ವ ಶಕ್ತನಾದ ಅಲ್ಲಾಹನಿಂದ ಸಹಾಯ ಯಾಚಿಸುವೆನು ಮತ್ತು ನನಗೆ ಸಂಪೂರ್ಣ ವಿಶ್ವಾಸವಿದೆ. ಅವನು ನನ್ನ ಬೇಡಿಕೆ ಕೇಳುವನು ಮತ್ತು ನಿಮಗೆ ನಿಮ್ಮ ತಪ್ಪುಗಳಿಂದ ಮೋಕ್ಷ ನೀಡುವನು. ಅದರಿಂದ ಕೇವಲ ನೀವೇ ಅಲ್ಲ ಬದಲಾಗಿ ಒಂದು ದೊಡ್ಡ ಸಮೂಹವೇ ಸಂಶಯಗಳಲ್ಲಿ ದೂಡಲಾಗುತ್ತಿದೆ. ನೀವು ಒಂದಿಷ್ಟು ಕಷ್ಟಪಟ್ಟು ಮತ್ತು ಸಜ್ಜನಿಕೆಯ ಸೋಗಿನಿಂದ ಹೊರಬಂದು ಕೆಲವು ವಾರಗಳಿಗೋಸ್ಕರ ಈ ವಿನೀತನ ಸಹವಾಸದಲ್ಲಿದ್ದರೆ ನನಗೆ ಸಂಪೂರ್ಣ ಭರವಸೆ ಇದೆ. ನೀವು ಹಲವು ಅಸಾಧಾರಣ ಪವಾಡಗಳನ್ನು ಸರಳ ರೀತಿಯಿಂದ ಸಹಜ ಮತ್ತು ಸಾಧ್ಯವಾದುದನ್ನು ಅರಿತುಕೊಳ್ಳುವಿರಿ. (ಆಯಿನಾ ಕಮಾಲತೆ ಇಸ್ಲಾಮ್, ರೂಹಾನಿ ಖಝಾಯೀನ್, ಸಂಪುಟ-5, ಪುಟ-240-241, ಅಡಿಟಿಪ್ಪಣಿ)

**ಸತ್ಯಾನ್ವೇಷಿಯಾದವರು ಯಾರೇ ಇರಲಿ ಅವರನ್ನು ದೃಷ್ಟಾಂತ ತೋರಿಸಲು ಸಾರ್ವಜನಿಕವಾಗಿ ಘೋಷಣೆ ಮಾಡುತ್ತಾ ಅವರು ಹೇಳಿದರು.**

ಸತ್ಯಶೋಧಕರು ಯಾರೇ ಇರಲಿ, ಹಿಂದೂ ಆಗಿರಲಿ, ಕ್ರೈಸ್ತನಾಗಿರಲಿ, ಅಥವಾ ಅರ್ಯ ಅಥವಾ ಯಹೂದಿ ಅಥವಾ ಬ್ರಹ್ಮೋ ಅಥವಾ ಯಾರೇ ಆಗಿರಲಿ ಅವರಿಗಾಗಿ ಇದು ಒಳ್ಳೆಯ ಅವಕಾಶವಾಗಿದೆ. ಯಾರು ನನ್ನ ಎದುರಿಗೆ ನಿಂತು ಅಗೋಚರ ಮಾಹಿತಿಗಳನ್ನು ಪಡೆಯುವವನಾದರೆ ಮತ್ತು ಪ್ರಾರ್ಥನೆ ಸ್ವೀಕೃತಿಯಲ್ಲಿ ನನ್ನನ್ನು ಮೀರಿಸುವವನಾದರೆ, ನಾನು ಅಲ್ಲಾಹನ ಮೇಲೆ ಆಣೆ ಮಾಡಿ ಹೇಳುತ್ತೇನೆ. ನನ್ನ ಎಲ್ಲ ಸ್ಥಿರ ಆಸ್ತಿ ಅಂದಾಜು ಹತ್ತು ಸಾವಿರ ಸಮೀಪವಿದೆ. ಅವನಿಗೆ ಒಪ್ಪಿಸುವೆನು ಅಥವ ಅವನಿಗೆ ಇಷ್ಟವಾದ ಪ್ರಕಾರ ದಂಡ ಕೊಟ್ಟು ತೃಪ್ತಿಪಡಿಸುವೆನು, ನನ್ನ ಏಕದೇವನಾದ ಅಲ್ಲಾಹನು ಸಾಕ್ಷಿಯಾಗಿದ್ದಾನೆ ಎಂದು ಎರಡು ಬಗೆಯಲಾರೆನು. ನನಗೆ ಮರಣ ದಂಡನೆ ಆದರೂ ಮನಃ ಪೂರ್ವಕವಾಗಿ ಸ್ವೀಕರಿಸುವೆನು. ನಾನು ಮನಃ ಪೂರ್ವಕವಾಗಿ ಹಾಗೂ ಅಲ್ಲಾಹನ ಸಾಕ್ಷಿಯಾಗಿ ಹೇಳುತ್ತೇನೆ. ಯಾರಿಗಾದರೂ ಸಂಶಯವಿದ್ದರೆ ಮತ್ತು ನನ್ನ ಈ ಮಾತುಗಳ ಮೇಲೆ ಭರವಸೆಯಿಲ್ಲದಿದ್ದರೆ, ನೀವಾಗಿ ಯಾವುದಾದರು ಒಳ್ಳೆಯ ಉಪಾಯ ಸೂಚಿಸಿ ದಂಡ ತೆರಲು ಹೇಳಿದರೆ ಅದನ್ನು ಸ್ವೀಕರಿಸುವೆನು. ಯಾವ ನೆಪವು ಮಾಡುವುದಿಲ್ಲ." (ಅದೇ ಪುಟ 276).

**ಕೇವಲ ಎರಡು ತಿಂಗಳು ಸಹವಾಸದಲ್ಲಿದ್ದು ದೃಷ್ಟಾಂತ ತೋರಿಸಲು ಆಹ್ವಾನ ನೀಡುತ್ತಾ ಅವರು ಹೇಳಿದರು.**

ನಾನು ಲೋಕದ ಎಲ್ಲ ಪ್ರವಾದಿಗಳನ್ನು ಗೌರವಿಸುತ್ತೇನೆ. ಅವರ ಗ್ರಂಥಗಳನ್ನು ಸಹ ಗೌರವಿಸುತ್ತೇನೆ. ಆದರೆ ಪ್ರಸಕ್ತ ಜೀವಂತವಾಗಿರುವ ಧರ್ಮ ಎಂದರೆ ಅದು ಕೇವಲ ಇಸ್ಲಾಮ್ ಧರ್ಮವಾಗಿದೆ ಎಂಬುದು ನನ್ನ ನಂಬಿಕೆಯಾಗಿದೆ. ಏಕೆಂದರೆ ಅದರ ಮೂಲಕ ಅಲ್ಲಾಹನು ನನ್ನ ಮೇಲೆ ಪ್ರಕಟವಾದನು. ಯಾವ ವ್ಯಕ್ತಿಗೆ ನನ್ನ ಈ ಹೇಳಿಕೆಯ ಮೇಲೆ ಸಂಶಯವಿದೆಯೋ ಅವನ ಕರ್ತವ್ಯವಾಗಿದೆ. ಈ ಮಾತುಗಳ ಸತ್ಯಶೋಧನೆಗಾಗಿ ಕನಿಷ್ಟಪಕ್ಷ ಎರಡು ತಿಂಗಳು ನನ್ನ ಬಳಿ ಬರಬೇಕು. ಅವನ ಎಲ್ಲ ಖರ್ಚು ವೆಚ್ಚ ಅವನಿಗೆ ಸಾಕಾಗುವಷ್ಟು ಈ ಅವಧಿಯಲ್ಲಿ ನನ್ನ ಹೊಣೆಯಾಗಿರುತ್ತದೆ. ನನ್ನ ದೃಷ್ಟಿಯಲ್ಲಿ ಜೀವಂತ ಧರ್ಮವೆಂದರೆ ಅದು ಈಗಲೂ ಜೀವಂತವಾದ ತನ್ನ ಶಕ್ತಿ ಸಾಮರ್ಥ್ಯಗಳ ದೃಷ್ಟಾಂತಗಳನ್ನು ತೋರಿಸಬೇಕು. ಕೇವಲ ಬಾಯಿಮಾತಿನ ಪುರಾವೆಗಳಿಂದ ವಾದಿಸುವ ಧರ್ಮ ಜೀವಂತ ಧರ್ಮವಲ್ಲ. (ಚಶ್ಮ ಮಅರಿಫತ್, ಪುಟ-428)

**ಎಲ್ಲ ಸಮುದಾಯಗಳ ನಡುವೆ ದೃಷ್ಟಾಂತ ಸಾಧಿಸುವ ಕುರಿತು ಪ್ರತಿಸ್ಪರ್ಧಿಸಲು ಅವರು ಬ್ರಿಟಿಷ್ ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಯಾವ ಧರ್ಮ ಸತ್ಯ ಹಾಗೂ ದೇವನ ಸಾನಿಧ್ಯ ಪಡೆದಿದೆ ಎಂದು ಈ ರೀತಿಯಾದರೂ ತಿಳಿಯಬಹುದೆಂದು ಅವರು ಬರೆದರು.**

ಈ ಪ್ರತಿವಾದಿಯು, ಅಂದರೆ ಈ ವಿನೀತನು ಸರಕಾರದ ಆದೇಶದ ಮೇರೆಗೆ ಒಂದು ವರ್ಷದ ಒಳಗೆ ಇಂತಹ ದೈವಿಕ ದೃಷ್ಟಾಂತ ತೋರಿಸುವೆನು, ಅದನ್ನು ಯಾವ ಸಮುದಾಯದವರೂ, ಪಂಥದವರೂ, ಈ ನೆಲದಲ್ಲಿರುವವರು ತೋರಿಸಲಾರರು. ಹಾಗೆಯೇ ಆ ಎಲ್ಲ ಮುಸಲ್ಮಾನರ ಬದಲು ಪ್ರತಿಯೊಂದು ಸಮುದಾಯದ ಮುಖಂಡರಿಗೆ, ಯಾರು ದೇವವಾಣಿ ಪಡೆಯುವ ಮತ್ತು ದೇವನ ಸಾನಿಧ್ಯ ಹೊಂದುವ ದಾವೆ ಉಳ್ಳವರಾಗಿದ್ದಾರೋ ಅವರಲ್ಲಿ ನಿವೇದಿಸಿ ಕೊಳ್ಳುತ್ತೇನೆ. ಅವರು ಸಹ ಒಂದು ವರ್ಷದವರೆಗೆ ಯಾವುದಾದರೂ ದೃಷ್ಟಾಂತ ತೋರಿಸಲಿ, ಆನಂತರ ಒಂದು ವರ್ಷದವರೆಗೆ ಈ ವಿನೀತನು ಮಾನವಶಕ್ತಿಯಿಂದ ಮೀರಿದ್ದಾಗಿರುವ ಯಾವುದೇ ಅಂತಹ ದೃಷ್ಟಾಂತ ತೋರಿಸದಿದ್ದಲ್ಲಿ, ಹಾಗೂ ಈ ತರಹದ ದೃಷ್ಟಾಂತ ಮುಸಲ್ಮಾನರಿಂದ ಅಥವಾ ಇನ್ನಿತರ ಸಮುದಾಯಗಳಿಂದ ಪ್ರಕಟಗೊಂಡರೆ, ನಾನು ಅಲ್ಲಾಹನ ಕಡೆಯವನು ಅಲ್ಲ ಎಂದು ಭಾವಿಸಲಾಗುವುದು. ಆ ಸಂಧರ್ಭದಲ್ಲಿ ನನಗೆ ಕಠಿಣವಾದ ಶಿಕ್ಷೆ ವಿಧಿಸಬಹುದು, ಮರಣದಂಡನೆ ಆದರೂ ಸರಿ. ಆದರೆ ಅಲ್ಲಾಹನು ಒಂದು ವರ್ಷದ ಒಳಗೆ ನನ್ನ ಸಹಕಾರಕ್ಕೆ ಬಂದರೆ ಮತ್ತು ಈ ನೆಲದಲ್ಲಿರುವವರಲ್ಲಿ ಯಾರೂ ನನ್ನ ಎದುರಿಗೆ ನಿಲ್ಲಲಿಲ್ಲವಾದರೆ ನಾನು ಬಯಸುವುದೇನೆಂದರೆ ದಯಾಳುವಾದ ಈ ಸರಕಾರ ನನ್ನ ವಿರೋಧಿಗಳ ಪೈಕಿ ಮೃದು ಧೋರಣೆ ತಾಳಲಿ ಮತ್ತು ನಿರ್ದೇಶನ ನೀಡಲಿ. ದೇವನ ಈ ಸತ್ಯದರ್ಶನದ ನಂತರವಾದರು ನಾಚಿಕೆ ಪಡಲಿ. ಎಲ್ಲ ಪೌರುಷ ಮತ್ತು ಸಾಹಸ ಸತ್ಯ ಸ್ವೀಕರಿಸುವುದರಲ್ಲಿದೆ. (ತಿರ್‌ಯಾಖುಲ್ ಖುಲೂಬ್, ರೂಹಾನಿ ಖಝಾಯೀನ್, ಸಂಪುಟ-15, ಪುಟ-494)

ಮುಂದೆ ಇನ್‌ಶಾ ಅಲ್ಲಾಹ್ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಮುಂದೆ ಪ್ರಸ್ತುತಪಡಿಸುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.1, Thursday, 24 September 2020, Issue No. 37

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 36ರ ವರದಿಯ ಉಳಿದ ಭಾಗ)**

ಹುಝೂರ್ ಹೇಳಿದರು. ಮೇಯರ್ ಸಾಹಿಬ್ ಇಲ್ಲಿ ಭಾಷಣ ಮಾಡಿದರು. ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅವರು ಮತ್ತು ಇಲ್ಲಿಯ ಕೌನ್ಸಿಲ್, ಇಲ್ಲಿಯ ರಾಜಕೀಯ ಮುಖಂಡರು ಈ ಮಸೀದಿಯ ಸ್ಥಾಪನೆಗೆ ತುಂಬ ಶ್ರಮವಹಿಸಿದ್ದಾರೆ. ಕೇವಲ ಇಲ್ಲಿಯ ವ್ಯವಸ್ಥಾಪಕರಿಂದ ಅದು ಸಾಧ್ಯವಾಗುತ್ತಿರಲಿಲ್ಲ. ನಮ್ಮ ನೆರೆಹೊರೆಯವರು, ಸ್ಥಳಿಯ ಜನರು ಅದರಲ್ಲಿ ಭಾಗವಹಿಸದೆ ಇದ್ದರೆ ಈ ಕೆಲಸವಾಗುತ್ತಿರಲಿಲ್ಲ. ಆದುದರಿಂದ ನಾನು ಅದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನೀವು ಮಸೀದಿಯ ನಿರ್ಮಾಣ ಕಾರ್ಯದಲ್ಲಿ, ಅದರ ಸ್ಥಾಪನೆಯಲ್ಲಿ ಸಹಾಯ ಮಾಡಿದಿರಿ. ಒಂದು ಮನೆ ಅಹ್ಮದಿಯರಿಗೋಸ್ಕರ ಅಲ್ಲಾಹನ ಆರಾಧನೆ ಮಾಡಲು ಒದಗಿಸಿಕೊಟ್ಟಿದ್ದೀರಿ. ಇಲ್ಲಿ ಒಟ್ಟುಗೂಡಿ ಸೇರಿ ಮಾನವೀಯತೆಯ ಸೇವೆಗಳ ಯೋಜನೆ ರೂಪಿಸಲು ನೆರವಗಿದ್ದೀರಿ. ಇಲ್ಲಿಯ ನಾಗರಿಕರ ಸೇವೆ ಮಾಡಲು ತನ್ನ ಕಾರ್ಯಯೋಜನೆ ಸಿದ್ಧಗೊಳಿಸಲು ಮತ್ತು ಇಲ್ಲಿ ಬಂದು ಸಮಾರಂಭಗಳನ್ನು ನಡೆಸಲು ಸ್ಥಳ ಮಾಡಿಕೊಟ್ಟಿದ್ದೀರಿ.

ನಮ್ಮ ಮಸೀದಿಗಳು ಎಲ್ಲರಿಗೋಸ್ಕರ ಮುಕ್ತವಾಗಿವೆ. ಅದೇ ಉದ್ದೇಶದಿಂದ ಕೆಲ ಸ್ಥಳಗಳಲ್ಲಿ Multipurpose Hall ನಿರ್ಮಿಸಲಾಗುತ್ತದೆ. ಯಾವ ಸಮಾರಂಭವಾಗಲಿ, ಅದು ಅಮುಸ್ಲಿಮರದ್ದೇ ಆಗಿರಲಿ ನಿಸ್ಸಂದೇಹವಾಗಿ ಇಲ್ಲಿ ಬಂದು ಹಮ್ಮಿಕೊಳ್ಳಬಹುದು.

ಹುಝೂರ್ ಹೇಳಿದರು. ಮೇಯರ್ ಸಾಹಿಬ್ ಒಂದು ಒಳ್ಳೆಯ ಮಾತು ಹೇಳಿದ್ದಾರೆ. ಲೋಕವು ಏಕತ್ರವಾಗುತ್ತಿದೆ. ಅದೇ ಮಾತು ನಾನು ಹೆಚ್ಚಾಗಿ ಹೇಳುತ್ತಿರುತ್ತೇನೆ. ದೂರವಾಗಿದ್ದ ಆ ಕಾಲ ಮುಗಿದು ಹೋಗಿದೆ. ಈಗ ದೂರ ಗತಿಸಿ ಸಮೀಪಿಸಿವೆ. ಸಂಪರ್ಕವು ಸುಲಭವಾಗಿದೆ. ತಿಂಗಳುಗಳ ಪ್ರಯಾಣ ಗಂಟೆಗಳಲ್ಲಿ ಆಗ ತೊಡಗಿವೆ. ಸಂಪರ್ಕಿಸಲು ತಿಂಗಳ ಜಾಗದಲ್ಲಿ ಸೆಕೆಂಡುಗಳಲ್ಲಿ ಸಂಪರ್ಕಿಸಬಹುದಾಗಿದೆ. ಸೆಕೆಂಡುಗಳಿಗಿಂತಲೂ ಕಡಿಮೆ ಸಮಯದಲ್ಲಿ ಸಂಪರ್ಕ ಸಾಧಿಸಬಹುದಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಲೋಕ ಒಬ್ಬರು ಮತ್ತೊಬ್ಬರನ್ನು ಅರ್ಥೈಸಿಕೊಳ್ಳುತ್ತಿದೆ. ಒಬ್ಬರು ಮತ್ತೊಬ್ಬರ ಸ್ಥಿತಿ ತಿಳಿದುಕೊಳ್ಳುತ್ತಾರೆ. ಈಗ ನಾವು ಅಲ್ಲಾಹನ ಅನುಗ್ರಹದಿಂದ ಲೋಕದ 206 ದೇಶಗಳಲ್ಲಿ ಇದ್ದೇವು. ಇಲ್ಲಿ ಈ ನಗರದಲ್ಲಿ ಏನೆಲ್ಲ ನಡೆಯುತ್ತದೆ. ಅದು ಕೆಲವು ಸೆಕೆಂಡುಗಳಲ್ಲಿ, ಉದಾಹರಣೆಗೆ: ಅಹ್ಮದಿಯಾ ಜಮಾಅತಿನ ಮೂಲಕವೇ, ಕೆಲವು ಸೆಕೆಂಡುಗಳಲ್ಲಿ ಅಥವಾ ಸ್ವಲ್ಪ ಸಮಯದಲ್ಲಿಯೇ ಇಲ್ಲಿ ನಡೆಯುತ್ತಿರುವ ಸಮಾರಂಭದ ಸುದ್ಧಿ ಇಡೀ ಲೋಕದ ಅಹ್ಮದಿಯರು ತಿಳಿದುಕೊಳ್ಳುತ್ತಾರೆ. ಕೇವಲ ಅಹ್ಮದಿಯರಲ್ಲ ಅಹ್ಮದಿಯರಿಗೆ ಸಂಬಂಧಿಸಿದ ಇತರರು ಸಹ ತಿಳಿದುಕೊಳ್ಳುತ್ತಾರೆ. ಕೆಲವು ಕಡೆ ಅಲ್ಲಿಯ ಸ್ಥಳೀಯ T.V. Channel ಮತ್ತು ರೇಡಿಯೋ ಈ ಸುದ್ದಿ ಪ್ರಸಾರ ಮಾಡುತ್ತವೆ. ಅವರಿಗೆ ಈ ವಿಷಯ ತಿಳಿಯುತ್ತದೆ. ಅವರು ಪ್ರಸಾರ ಮುಂದುವರಿಸುತ್ತಾರೆ. ಹೀಗೆ ದೂರವು ಕಡಿತಗೊಂಡು ಸಮೀಪಿಸಿವೆ. ಈ ನಗರದ ಜನಸಂಖ್ಯೆ 90 ಸಾವಿರ ಎಂದು ಹೇಳಲಾಗುತ್ತದೆ. ಈ ನಗರದಲ್ಲಿ ಆಗುತ್ತಿರುವ ಈ ಸಮಾರಂಭದ ಸುದ್ದಿ ಲೋಕದ ಎಲ್ಲ ದೇಶಗಳವರೆಗೆ ತಲುಪುತ್ತಿದೆ. ಇದಕ್ಕಿಂತ ದೂರಗಳು ಸಮೀಪಿಸುವ ಉದಾಹರಣೆ ಬೇರೇನಿದೆ. ಈ ಸಣ್ಣದಾದ ನಗರದಲ್ಲಿ ಇದರ ಜನಸಂಖ್ಯೆ 90 ಸಾವಿರ ಆಗಿದೆ. ಇಲ್ಲಿ 127 ಸಮುದಾಯಗಳು ಇರುತ್ತವೆ ಎಂದು ಕೇಳಿ ಅಚ್ಚರಿಯಾಯಿತು. ಅವರು ಪ್ರೀತಿ ಸ್ನೇಹದಿಂದ ಇರುವರೆಂದು, ಅಷ್ಟೆಲ್ಲ ವಿಭಿನ್ನ ಪೀಳಿಗೆಗಳು ಮತ್ತು ಸಮುದಾಯಗಳ ಇರುವಿಕೆಯು ಸೂಚಿಸುವುದೇನೆಂದರೆ ಈ ನಗರದ ಜನರು ಹೃದಯವಂತರಾಗಿದ್ದಾರೆ. ಅದು ಕೇವಲ ಮೌಖಿಕ ರೀತಿಯಲ್ಲಿ ಅಲ್ಲ. ನಡತೆಯಿಂದಲೂ ಸಾಬೀತಾಗಿದೆ. ಇದು ಈ ನಗರವಾಸಿಗಳ ಉತ್ತಮ ನಡತೆಯಾಗಿದೆ. ನನ್ನ ಪ್ರಾರ್ಥನೆಯಿದೆ. ಇದು ಎಂದೆಂದಿಗೂ ಹೀಗೆ ಜನರಲ್ಲಿ ಖಾಯಂ ಆಗಿರಲಿ ಎಂದು.

ಹುಝೂರ್ ಹೇಳಿದರು. ನಾನು ಹೇಳಿದಂತೆ ನಮ್ಮ ಸೃಷ್ಟಿಕರ್ತನು ನಮಗೆ ತಿಳಿಸಿದನು ನನ್ನ ಗುಣಗಳನ್ನು ಅಳವಡಿಸಿಕೊಳ್ಳಿರಿ ಎಂದು. ಅವನು ನಮಗೆ ಹೇಳಿದ ಒಬ್ಬರು ಮತ್ತೊಬ್ಬರನ್ನು ಪ್ರೀತಿಸಿರಿ ಎಂದು. ಅವನು ಪ್ರೀತಿ ಮತ್ತು ಕರುಣೆ ನಮ್ಮ ಜನ್ಮಕುಂಡಲಿಯಲ್ಲಿಯೇ ಇಟ್ಟಿರುತ್ತಾನೆ. ಆದರೆ ಕೆಲವರು ಕೆಲ ಸಂದರ್ಭಗಳಲ್ಲಿ ತಮ್ಮ ಸ್ವಾರ್ಥಕ್ಕಾಗಿ ಗಲಭೆಗಳನ್ನುಂಟು ಮಾಡುತ್ತಾರೆ. ಪರಸ್ಪರ ದ್ವೇಷ ಹರಡುವ ಕೆಲಸ ಮಾಡುತ್ತಾರೆ. ಆದುದರಿಂದ ಇಂತಹ ಜನರಿಂದ ದೂರ ಇರಬೇಕಾಗುವುದು ಪ್ರತಿಯೊಬ್ಬ ಬುದ್ಧಿವಂತನ ಕೆಲಸವಾಗಿದೆ. ಅಹ್ಮದಿಯಾ ಜಮಾಅತ್ತಿನ ಮಟ್ಟಿಗೆ ಹೇಳುವುದಾದರೆ, ನಮ್ಮಲ್ಲಿ ಪಿತೂರಿ ಹೂಡಿದರೂ, ನಮ್ಮ ವಿರೋಧ ಮಾಡಿದರೂ, ಯಾರು ಏನೂ ಹೇಳಿದರೂ ಅಗತ್ಯಬಿದ್ದರೆ ಕಾನೂನಿನ ನೆಲೆಯಲ್ಲಿ ನಾವು ಅವಶ್ಯವಾಗಿ ಅದಕ್ಕೆ ಉತ್ತರ ನೀಡುವೆವು. ಆದರೆ ಕಾರಣವಿಲ್ಲದೆ ಒಳಸಂಚು ಮಾಡುವ ಅಥವಾ ಪಿತೂರಿ ಹೂಡುವ ವಾತಾವರಣವನ್ನು ಕಲುಷಿತಗೊಳಿಸುವ ಪ್ರಯತ್ನ ಮಾಡುವುದಿಲ್ಲ. ನನ್ನ ಭಾವನೆಯಾಗಿದೆ. ನೀವು ಸಹ ಇಲ್ಲಿ ಜಮಾಅತ್ತಿನ ಮಾದರಿ ನೋಡಿರಬಹುದು. ಈ ಮಸೀದಿಯ ನಿರ್ಮಾಣದ ನಂತರ ಅಂತೂ ನೀವು ಇನ್ನಷ್ಟು ಸ್ಪಷ್ಟ ರೂಪದಲ್ಲಿ ಇನ್‌ಶಾಲ್ಲಾಹ್ ಜಮಾಅತಿನ ನಡವಳಿಕೆ ಕಾಣಬಹುದು. ಆದುದರಿಂದ ನಾನು ಇಲ್ಲಿಯ ಅತಿಥಿಗಳೊಂದಿಗೆ, ಇಲ್ಲಿಯ ನಾಗರಿಕರೊಂದಿಗೆ ವಿನಂತಿಸಿ ಕೊಳ್ಳುತ್ತೇನೆ. ಈ ಪ್ರೀತಿ, ಸ್ನೇಹ, ಸೌಹಾರ್ಧತೆ ಹಾಗೂ ಕೂಡಿ ಬಾಳುವ ಸಂಸ್ಕೃತಿಯನ್ನು ಬೆಳೆಸಿಕೊಂಡು ಹೋಗಬೇಕು. ಯಾರಾದರೂ ಗಲಭೆ ಉಂಟು ಮಾಡಲು ಪ್ರಯತ್ನಿಸಿದರೆ ನಾವೆಲ್ಲರೂ ಸೇರಿ ಅದನ್ನು ಸದಾ ನಮ್ಮ ಜೊತೆಗಿರುವುದು ಅಲ್ಲದೇ ಎಲ್ಲರಿಗಿಂತ ಮುಂದಿರುವುದು. ಇಂದು ಲೋಕಕ್ಕೆ ಉಗ್ರವಾದ ಅಲ್ಲ ಪ್ರೀತಿಯ ಅವಶ್ಯಕತೆ ಇದೆ. ಸ್ನೇಹದ ಅಗತ್ಯವಿದೆ. ಸೌಹಾರ್ಧತೆಯ ಲೋಕದಲ್ಲಿ ಪ್ರೀತಿ ಮತ್ತು ಸ್ನೇಹ ಬೆಳೆಸಬೇಕಾದರೆ ಎಲ್ಲ ಹಂತದಲ್ಲಿ ಅದು ನಗರವಾಗಲಿ, ರಾಜ್ಯದಲ್ಲಾಗಲಿ, ದೇಶಗಳ ಹಂತದಲ್ಲಾಗಲಿ, ಲೋಕದ ಹಂತದಲ್ಲಾಗಲಿ ಪರಸ್ಪರ ಸಹಿಷ್ಣುತೆ ಮತ್ತು ಪ್ರೀತಿ ಸ್ನೇಹ ಬೆಳೆಸಲು ಎಲ್ಲ ರೀತಿಯ ಪ್ರಯತ್ನ ಕೈಗೊಳ್ಳಬೇಕಾಗುವುದು ಮತ್ತು ಎಲ್ಲರೂ ಸೇರಿ ಈ ಕಾರ್ಯ ಮಾಡಬೇಕಾಗುವುದು. ವಿಭಿನ್ನ ಸಮುದಾಯಗಳಿವೆ. ವಿಭಿನ್ನ ಧರ್ಮಗಳಿವೆ. ವಿಭಿನ್ನ ಗೋತ್ರಗಳಿವೆ. ಅದು ಅಲ್ಲಾಹನೆ ಸೃಷ್ಟಿಯೇ ಆಗಿದೆ. ಆದರೆ ಒಂದು ವಿಷಯ ಅಲ್ಲಾಹನು ಎಲ್ಲರಿಗೂ ಹೇಳಿದ್ದಾನೆ. ನೀವು ಗಲಬೆ ಉಂಟು ಮಾಡುವವರಲ್ಲಿ ಆಗಬೇಡಿರಿ. ಬದಲು ಪರಸ್ಪರ ಪ್ರೀತಿ ಸ್ನೇಹವನ್ನು ಬೆಳೆಸಿರಿ. ಈ ಶಿಕ್ಷಣವನ್ನೇ ನಾವು ಎಲ್ಲ ಕಡೆ ಪ್ರಸಾರ ಮಾಡುತ್ತೇವೆ ಮತ್ತು ಅದರಂತೆ ನಡೆಯುವ ಪ್ರಯತ್ನ ಮಾಡುತ್ತೇವೆ.

ಹುಝೂರ್ ಹೇಳಿದರು. ನಾವು ಮತ್ತು ಮೇಯರ್ ಸಾಹಿಬ್ ಇದೀಗ ಸ್ಪಷ್ಟಪಡಿಸಿದಂತೆ ಅಹ್ಮದಿಯಾ ಜಮಾಅತಿನ ಈ ಮಸೀದಿ ಎಲ್ಲರಿಗಾಗಿ ಮುಕ್ತವಾಗಿರುವುದು. ನಿಶ್ಚಯವಾಗಿಯೂ ಇದು ಮುಕ್ತವಾಗಿರುವುದು. ಮುಕ್ತವಾಗಿರಲು ಕಾರಣ ನಮ್ಮಲ್ಲಿ ಪರಸ್ಪರ ಪ್ರೀತಿಯ ಸಂಬಂಧಗಳು ಬೆಳೆಯಬೇಕು. ಇಲ್ಲಿ ವಿವಿಧ ಸಂಸದರು ಸಹ ಭಾಷಣ ಮಾಡಿದ್ದಾರೆ. ರಾಜಕಾರಣಿಗಳು ಮಾತನಾಡಿದ್ದಾರೆ. ಶಾಂತಿಯನ್ನು ಭಂಗಗೊಳಿಸ ಬಯಸುವವರು ಬಹಳಷ್ಟು ಜನರಿದ್ದಾರೆ, ನಾನು ಹೇಳಿದಂತೆ ಅವರ ಕೆಲಸವೇ ಅದಾಗಿದೆ. ಆದರೆ ನಾವು ಅವರಿಂದ ಉಳಿಯಬೇಕಾಗಿದೆ. ನಿಶ್ಚಯವಾಗಿಯೂ ಅಂತಹ ಗಲಭೆಕೋರರಿಂದ ದೂರವಿರುವುದು ಬುದ್ಧಿವಂತರ ಕೆಲಸವಾಗಿದೆ. ನಾವು ಪ್ರೀತಿ ವಿಶ್ವಾಸ ಸ್ಥಾಪನೆ ಮಾಡಬೇಕಾಗಿದೆ. ಲೋಕವು ಪರಸ್ಪರರಲ್ಲಿ ಒಳಕುಂಟು ಮಾಡಿ ಗಲಭೆಗಳನ್ನು ಸೃಷ್ಟಿಸಿ, ಯುದ್ಧಗಳನ್ನು ಅದರಿಂದ ನಾವು ಕಂಡಿದ್ದೇವೆ.

ಈ ಹಿಂದೆ ಎರಡು ಮಹಾಯುದ್ಧಗಳಾದವು. ಅದರಿಂದ ನಾವು ಕಂಡಿದ್ದು ಲೋಕದ ವಿನಾಶ ಮಾತ್ರ. ಮಿಲಿಯನ್‌ಗಟ್ಟಲೆ ಜನರು ಸಾವನ್ನಪ್ಪಿದರು. ಯುದ್ಧಗಳಿಂದ ತಮ್ಮ ಜೀವಗಳನ್ನು ಕಳೆದುಕೊಂಡರು. ಆದುದರಿಂದ ಶಾಂತಿಯೇ ವಾಸ್ತವವಾಗಿದೆ. ಶಾಂತಿಯಿಂದಲೇ ಮಾನವ ಮೌಲ್ಯಗಳು ನೆಲೆ ನಿಲ್ಲುವುದು. ಶಾಂತಿ ಸ್ಥಾಪನೆಗೊಳ್ಳುವುದು, ಪ್ರೀತಿ ವಿಶ್ವಾಸ ಮತ್ತು ಪರಸ್ಪರ ಸಂಬಂಧಗಳು ಗಟ್ಟಿಯಾಗುವುದು, ಆದುದರಿಂದ ನಾವು ಶಾಂತಿ ಸ್ಥಾಪನೆ ಮಾಡ ಬಯುಸುವುದಾದರೆ ಸದಾ ಈ ಮಾತು ನೆನಪಿಡಬೇಕಾಗಿದೆ. ಅದಕ್ಕಾಗಿ ಎಲ್ಲ ನೆಲೆಯಿಂದಲೂ ಪ್ರೀತಿ ವಿಶ್ವಾಸವನ್ನು ಜಾರಿಯಲ್ಲಿರಿಸಬೇಕು.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.